ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	385
ಸದಸ್ಯರ ಹೆಸರು	:	ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	15.09.2021
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರಗಳು
(1)	ಲೋಕೋಪಯೋಗಿ ಇಲಾಖಾ ಗುಣಮಟ್ಟ ಹಾಗೂ ಕಾಮಗಾರಿಗಳ ಗುಣಮಟ್ಟದ ಮಾಪನ ವ್ಯವಸ್ಥೆ ಬಗ್ಗೆ ಸರ್ಕಾರ ಯಾವ ರೀತಿಯ ವ್ಯವಸ್ಥೆ ರೂಡಿಸಿಕೊಂಡಿದೆ (ವಿವರವಾದ ಮಾಹಿತಿ ಒದಗಿಸುವುದು)	ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ ಅವುಗಳ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಹೊಸ ಸ್ವತಂತ್ರ ಸಂಸ್ಥೆಗಳನ್ನು ರಚಿಸುವ ಅವಶ್ಯಕತೆಯನ್ನು ಮನಗಂಡು ಮುಖ್ಯ ಇಂಜಿನಿಯರ್ ವೃಂದದ ಅಧಿಕಾರಿಯ ಮೇಲುಸ್ತುವಾರಿಯಲ್ಲಿ ರಾಜ್ಯ ಮಟ್ಟದ ಗುಣಭರವಸೆ ವಲಯವನ್ನು ರಚಿಸಲಾಗಿರುತ್ತದೆ. ಅದರ ವ್ಯಾಪ್ತಿಯಲ್ಲಿ 4 ವೃತ್ತ ಕಛೇರಿಗಳು, 8 ವಿಭಾಗ ಕಛೇರಿಗಳು ಮತ್ತು 18 ಉಪ ವಿಭಾಗಗಳಿದ್ದು ಅದರಲ್ಲಿ 7 ವಿಭಾಗಗಳು ಮತ್ತು 16 ಉಪವಿಭಾಗಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ. ಗುಣಭರವಸೆ ಅಧಿಕಾರಿಗಳು ಇಲಾಖಾ ಕಾಮಗಾರಿಗಳ ಗುಣಮಟ್ಟದ ಪರಿಶೀಲನೆ ಮಾಡುವ ಸಂಬಂಧ ನಿರ್ವಹಿಸಬೇಕಾದ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ನಿಗಧಿಪಡಿಸಿ ದಿನಾಂಕ: 22.07.2014ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ (ಪ್ರತಿಯನ್ನು ಅನುಬಂಧ-!ರಲ್ಲಿ ನೀಡಿದೆ).
(2)	ಈ ಕುರಿತು ಸರ್ಕಾರ ರೂಪಿಸಿರುವ ರೂಪು ರೇಷೆಗಳಾವುವು; ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದ ಚಿಂತನೆಗಳೇನು;	ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ರಸ್ತೆ, ಸೇತುವೆ ಮತ್ತು ಕಟ್ಟಡ ಇತ್ಯಾದಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ ನಿಗಧಿತ ಗುಣಮಟ್ಟಕ್ಕೆ ಪೂರಕವಾಗುವಂತೆ ಅನುಮೋದಿತ ಅಂದಾಜು ಪಟ್ಟಿ, ಗುತ್ತಿಗೆ ಕರಾರಿನಲ್ಲಿ ವಿಶಿಷ್ಟ ವಿವರಣೆಯನುಸಾರ ಬಳಸಲಾಗುವ ಕಚ್ಚಾಸಾಮಾಗ್ರಿಗಳ ಗುಣಮಟ್ಟ ಹಾಗೂ ನಿರ್ಮಾಣ ಕಾರ್ಯ ವಿಧಾನಗಳ ಬಗ್ಗೆ ತಾಂತ್ರಿಕ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡುವ ಜವಾಬ್ದಾರಿಯು ಗುಣಭರವಸೆ ವಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳದ್ದಾಗಿರುತ್ತದೆ. ಆಧುನಿಕ ತಂತ್ರಜ್ಞಾನವನ್ನು ಅವಶ್ಯವಿರುವೆಡೆಗೆ ಬಳಸಿಕೊಳ್ಳಲು ಅನುವಾಗುವಂತೆ ಅಧಿಕಾರಿಗಳಿಗೆ ಕಾಲಕಾಲಕ್ಕೆ ತರಬೇತಿಗಳನ್ನು ನೀಡಲಾಗುತ್ತಿದೆ. ಅಲ್ಲದೆ BIS, IRC, NBC, IBC ಹಾಗೂ ಇತರೆ ಮನ್ನಣೆ ಪಡೆದ ಮಾನಕ ಸಂಸ್ಥೆಗಳು ನಿಗಧಿಪಡಿಸಿರುವ ಸಂಹಿತೆಗಳು; ಗುಣಭರವಸೆ ಕೈಪಿಡಿಯಂತೆ ಬಳಸಲಾಗುವ ಸಾಮಾಗ್ರಿಗಳ ಗುಣಮಟ್ಟ ಹಾಗೂ ನಿರ್ಮಾಣ ಕಾರ್ಯವಿಧಾನಗಳ ಬಗ್ಗೆ ಪರಿಶೀಲನೆ ಮಾಡಿ ಕಾಮಗಾರಿಗಳನ್ನು ಗುಣಾತ್ಮಕವಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

....2..

ಕ್ರ ಸಂ	ಪ್ರಶ್ನೆ	ಉತ್ತರಗಳು
		ಅಲ್ಲದೇ, ಗುಣಭರವಸೆ ವಲಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ತಾಂತ್ರಿಕ ನೈಪುಣ್ಯತೆ ಹೊಂದಿರುವ ಅಧಿಕಾರಿಗಳ ನೈಪುಣ್ಯತೆಯನ್ನು ಬಳಸಿಕೊಳ್ಳುವುದರ ಜೊತೆಗೆ ನಿಯಮಾನುಸಾರ ಅಗತ್ಯವಿರುವೆಡೆ ಗುಣಮಟ್ಟವನ್ನು ಕಾಪಾಡಿಕೊಳ್ಳಲು 3ನೇ ವ್ಯಕ್ತಿ ತಪಾಸಣೆ, ತಜ್ಞರನ್ನೊಳಗೊಂಡ ಸಮಾಲೋಚಕರನ್ನು ನೇಮಿಸಿಕೊಂಡು ಅವರ ಸಲಹೆಗಳನ್ನು ಪಡೆದು ಕಾಮಗಾರಿಯಲ್ಲಿ ಗುಣಮಟ್ಟವನ್ನು ಕಾಪಾಡಿಕೊಳ್ಳಲಾಗುತ್ತದೆ.
(3)	ಕಾಮಗಾರಿ ಗುಣ ನಿಯಂತ್ರಣ ಕಾರ್ಯಪಡೆಯ ಮಧ್ಯಂತರ ವರದಿ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಈ ಕುರಿತು ಸರ್ಕಾರದ ಅಭಿಪ್ರಾಯಗಳೇನು? (ವಿವರ ಒದಗಿಸುವುದು)	ಸರ್ಕಾರದ ಆದೇಶ ಸಂಖ್ಯೆ: ಲೋಇ 64 ಇಎಪಿ ದಿನಾಂಕ:03.11.2008 ರಲ್ಲಿ ಡಾ: ಸಿ.ಎಸ್. ವಿಶ್ವನಾಥ್ ಇವರ ಅಧ್ಯಕ್ಷತೆಯಲ್ಲಿ ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆಯನ್ನು ಸೃಜಿಸಲಾಗಿದೆ. ಸದರಿ ಕಾರ್ಯಪಡೆಯು ದಿನಾಂಕ:12.09.2012 ರಂದು ಮಧ್ಯಂತರ ಶಿಫಾರಸ್ಸು / ವರದಿಯನ್ನು ಸಲ್ಲಿಸಿರುತ್ತದೆ. ಈ ಶಿಫಾರಸ್ಸಿನಲ್ಲಿ 40 ಆಡಳಿತಾತ್ಮಕ ಶಿಫಾರಸ್ಸು ಹಾಗೂ 43 ತಾಂತ್ರಿಕ ಶಿಫಾರಸ್ಸು ಒಳಗೊಂಡಿರುತ್ತವೆ (ಅನುಬಂಧ-2). ಈ ವರದಿಯು ಲೋಕೋಪಯೋಗಿ, ಜಲಸಂಪನ್ಮೂಲ ಹಾಗೂ ನಗರಾಭಿವೃದ್ಧಿ ಇಲಾಖೆಗಳಿಗೆ ಅನ್ವಯಿಸುತ್ತಿದ್ದು, ಪ್ರಸ್ತುತ ಈ ಮಧ್ಯಂತರ ವರದಿಯ ಶಿಫಾರಸ್ಸುಗಳನ್ನು ಚಾಲ್ತಿಯಲ್ಲಿರುವ ನಿಯಮಾವಳಿಗಳು ಸಂಪನ್ಮೂಲ ಲಭ್ಯತೆ ಮುಂತಾದ ಅಂಶಗಳನ್ನು ಪರಿಗಣಿಸಿ ಕ್ರಮ ವಹಿಸಬೇಕಿದೆ.

ಲೋಇ 57 ಪಿಕ್ಯೂಎನ್ 2021(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು

ಅನುಬಂಧ - 1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿನ ಗುಣ ಭರವಸೆ (Quality Assurance) ಅಧಿಕಾರಿಗಳ ಕಾರ್ಯನಿರ್ವಹಣೆ ಮತ್ತು ಹೊಣೆಗಾರಿಕೆ ಪರಿಷ್ಕರಣೆ ಕುರಿತು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಲೋಇ 137 ಸೇಇವಿ 2009 ದಿನಾಂಕ 22.2.2010ನ್ನು ಪರಿಷ್ಕರಿಸುವ ಬಗ್ಗೆ – ಆದೇಶ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ಲೋಇ 137 ಸೇಇವಿ 2009 ದಿನಾಂಕ 22.2.2010.
2) ಸರ್ಕಾರದ ಆದೇಶ ಸಂಖ್ಯೆ: ಲೋಇ 99 ಸೇಇವಿ 2010 ದಿನಾಂಕ 21.4.2010
3) ಮುಖ್ಯ ಇಂಜಿನಿಯರ್, ಸಂಕ(ದ) ಬೆಂಗಳೂರು ಇವರ ಪತ್ರ ಸಂಖ್ಯೆ: ಮುಇಂ: ಸಂಕದ: ಬೆಂ: ಗುಣ ಭರವಸೆ:2010-11 ದಿನಾಂಕ: 21.6.2010
4) ದಿನಾಂಕ 7.6.2013ರಂದು ಕಾರ್ಯದರ್ಶಿಗಳು, ಲೋ.ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.
5) ದಿನಾಂಕ 6.11.2013 ರಂದು ಪ್ರಧಾನ ಕಾರ್ಯದರ್ಶಿಗಳು, ಲೋ.ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ:

ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸಲಾಗುತ್ತಿರುವ ಎಲ್ಲಾ ಕಾಮಗಾರಿಗಳನ್ನು ವಿಶಿಷ್ಟ ವಿವರಣೆಯಂತೆ ನಿಗದಿಪಡಿಸಿದ ಅಥವಾ ಟೆಂಡರು ನಿಯಮಗಳಂತೆ ನಿಗದಿತ ಕಾಲಾವಧಿಯೊಳಗಾಗಿ ಪ್ರತಿಯೊಂದು ಹಂತದಲ್ಲಿಯೂ ಗುಣಮಟ್ಟದ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರು, ನಿರ್ಮಾಣ ಉಸ್ತುವಾರಿ ಇಂಜಿನಿಯರುಗಳು ಮತ್ತು ಗುಣ ಭರವಸೆ ಇಂಜಿನಿಯರುಗಳ ಪೂರ್ಣಪ್ರಮಾಣದಲ್ಲಿ ತೊಡಗುವಿಕೆಯಿಂದ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಹಿಂದೆ ಅಸ್ತಿತ್ವದಲ್ಲಿದ್ದ **ಗುಣ ನಿಯಂತ್ರಣ** ಅಧಿಕಾರಿಗಳು, ಕಛೇರಿ ಮತ್ತು ಇತ್ಯಾದಿ ಹೆಸರುಗಳನ್ನು **ಗುಣಭರವಸೆ** ಎಂದು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪುನರ್‌ನಾಮಾಂಕಿತಗೊಳಿಸಲಾಗಿರುತ್ತದೆ. ಈ ಆದೇಶದಲ್ಲಿ ವಿವಿಧ ಕಾಮಗಾರಿಗಳ ಗುಣಮಟ್ಟವನ್ನು ವ್ಯವಸ್ಥಿತವಾಗಿ ಮತ್ತು ಜವಾಬ್ದಾರಿಯುತವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಗುಣ ಭರವಸೆ ವ್ಯವಸ್ಥೆಯ ವಿವಿಧ ಹಂತದ ಅಧಿಕಾರಿಗಳಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸಲಾಗಿರುತ್ತದೆ.

ದಿನಾಂಕ 22.2.2010ರ ಆದೇಶದ ಬಗ್ಗೆ ಮುಖ್ಯ ಇಂಜಿನಿಯರ್, ಸಂಕ(ದ), ಬೆಂಗಳೂರು ಮತ್ತು ಸಂಕ(ಉ), ಧಾರವಾಡ ರವರಿಗೆ ವಿವಿಧ ಗುಣ ಭರವಸೆ ವಿಭಾಗಗಳಿಂದ ಹಲವಾರು ಆಕ್ಷೇಪಣೆಗಳು ಬಂದಿದ್ದು ಸದರಿ ಆಕ್ಷೇಪಣೆಗಳಲ್ಲಿ ಪ್ರಸ್ತುತ ಲಭ್ಯವಿರುವ ಸಿಬ್ಬಂದಿ ಮತ್ತು ಸೌಲಭ್ಯಗಳಿಂದ ದಿನಾಂಕ 22.2.2010ರಲ್ಲಿ ನೀಡಿರುವ ನಿರ್ದೇಶನದನ್ವಯ ಗುಣ ಭರವಸೆಯನ್ನು ನಿರ್ವಹಿಸುವುದು ಕಷ್ಟಸಾಧ್ಯವೆಂದು ತಿಳಿಸಿರುವುದರಿಂದ, ಇಲಾಖಾ ಮುಖ್ಯಸ್ಥರುಗಳು ಸದರಿ ಆದೇಶವನ್ನು ಹಿಂದಕ್ಕೆ ಪಡೆಯುವಂತೆ ಸರ್ಕಾರವನ್ನು ಕೋರಿದ್ದರು. ಈ ಅಂಶಗಳನ್ನು ಪರಿಶೀಲಿಸಲು ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 15.4.2010 ರಂದು ಸಭೆ ಜರುಗಿ ಸದರಿ ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಲೋಕೋಪಯೋಗಿ ಇಲಾಖೆಯಲ್ಲಿ

ಕಾರ್ಯನಿರ್ವಹಿಸುವ ಪ್ರತಿ ಕಾಮಗಾರಿಯ ಬಗ್ಗೆ ಗುಣ ಭರವಸೆಯನ್ನು ಗುತ್ತಿಗೆದಾರರಿಂದ ಉಸ್ತುವಾರಿ ಇಂಜಿನಿಯರುಗಳಿಂದ ಹಾಗೂ ಗುಣ ನಿಯಂತ್ರಣ ಇಂಜಿನಿಯರುಗಳಿಂದ ಸಂಯೋಜಕವಾಗಿ ನಿರ್ಧರಿಸುವುದು ಸೂಕ್ತವೆಂದು ತೀರ್ಮಾನಿಸಿ, ಈ ಬಗ್ಗೆ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳು, ಮ್ಯಾನುಯಿಲ್ ಹಾಗೂ ದಿನಾಂಕ 22.2.2010ರ ಆದೇಶವನ್ನು ಪರಿಶೀಲಿಸಿ ಒಂದು ರಚನಾತ್ಮಕ ವರದಿಯನ್ನು ತಯಾರಿಸಲು ಮುಖ್ಯ ಇಂಜಿನಿಯರ್, ಸಂಕ(ದ), ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಒಂದು ಸಮಿತಿಯನ್ನು ರಚಿಸಿ ಈ ಕೆಳಕಂಡ ಅಂಶಗಳ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಲಾಗಿತ್ತು.

(1) ಗುಣ ಭರವಸೆ ಮ್ಯಾನುಯಿಲ್ ಹಾಗೂ ನೆರೆರಾಜ್ಯಗಳ ಲೋಕೋಪಯೋಗಿ ಇಲಾಖೆಗಳಲ್ಲಿನ ಗುಣ ಭರವಸೆ ವ್ಯವಸ್ಥೆ ಕುರಿತು

(2) ದಿನಾಂಕ 22.2.2010ರ ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸುವ ಬಗ್ಗೆ

(3) ಗುಣ ಭರವಸೆ ಬಗ್ಗೆ ಗುಣ ಭರವಸೆ ಅಧಿಕಾರಿಗಳ ಜವಾಬ್ದಾರಿ ಕುರಿತು

(4) ಗುಣ ಭರವಸೆ ಬಗ್ಗೆ ಗುತ್ತಿಗೆದಾರರ ಜವಾಬ್ದಾರಿ ಕುರಿತು

(5) ಕಾಮಗಾರಿ ಗುಣಮಟ್ಟದ ಕುರಿತು ವಿವಿಧ ಮಟ್ಟದ ಅಧಿಕಾರಿಗಳ ಜವಾಬ್ದಾರಿ ಬಗ್ಗೆ ಆಳತೆಗೋಲುಗಳನ್ನು ಸೂಚಿಸುವುದು

(6) ಸೂಕ್ತವೆನಿಸುವ ಇನ್ನಿತರೆ ಅಂಶಗಳು

ಮುಖ್ಯ ಇಂಜಿನಿಯರ್, ಸಂಕ(ದ), ಬೆಂಗಳೂರು ಇವರು ಸರ್ಕಾರದ ಆದೇಶ ಸಂಖ್ಯೆ: ಲೋಇ 99 ಸೇಇವಿ 2010 ದಿನಾಂಕ 21.4.2010 ರಲ್ಲಿ ಸೂಚಿಸಿರುವಂತೆ ಮುಖ್ಯ ಇಂಜಿನಿಯರ್‌ರವರು ಮೇಲಿನ 6 ಅಂಶಗಳ ಬಗ್ಗೆ ಪರಿಶೀಲಿಸಿ ಅಂದರೆ ಪ್ರತಿಯೊಂದು ಅಂಶದ ಬಗ್ಗೆ ಸುಧೀರ್ಘವಾಗಿ ಹಾಗೂ ಕೂಲಂಕಷವಾಗಿ ಚರ್ಚಿಸಿ ಸಮಿತಿಯ ಅಂತಿಮ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಆಧರಿಸಿ ವರದಿಯನ್ನು ತಯಾರಿಸಿ ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಪತ್ರದೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ್ದರು.

ಸದರಿ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ ಚರ್ಚಿಸಲು ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆಗಳನ್ನು ನಡೆಸಿ, ದಿನಾಂಕ 7.6.2013 ರಂದು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 6.11.2013ರಂದು ಸಭೆಗಳನ್ನು ನಡೆಸಿ ಸರ್ಕಾರದ ಆದೇಶ ಸಂಖ್ಯೆ: ಲೋಇ 137 ಸೇಇವಿ 2010 ದಿನಾಂಕ 22.2.2010ನ್ನು ಕಾರ್ಯಗತಗೊಳಿಸುವಲ್ಲಿ ಇರುವ ಸಾಧಕ ಬಾಧಕಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸಿರುವ ಪ್ರತಿ ಕಾಮಗಾರಿಯ ಬಗ್ಗೆ ಗುಣ ಭರವಸೆಯನ್ನು ಗುತ್ತಿಗೆದಾರರಿಂದ, ಉಸ್ತುವಾರಿ ಇಂಜಿನಿಯರುಗಳಿಂದ, ಹಾಗೂ ಗುಣ ಭರವಸೆ ಇಂಜಿನಿಯರುಗಳಿಂದ ಸಂಯೋಜಿತವಾಗಿ ನಿಗದಿಪಡಿಸುವುದು ಹಾಗೂ ನಿರ್ಧರಿಸುವುದು ಸೂಕ್ತವೆಂದು ತೀರ್ಮಾನಿಸಿ ಈ ಬಗ್ಗೆ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳು, ಮ್ಯಾನುಯಲ್ ಮತ್ತು ದಿನಾಂಕ 22.2.2010ರ ಸರ್ಕಾರಿ ಆದೇಶ ಇವುಗಳನ್ನು ಸಮಗ್ರವಾಗಿ ಪರಿಶೀಲಿಸಿ ಜವಾಬ್ದಾರಿ ನಿಗದಿಪಡಿಸುವ ಬಗ್ಗೆ ಮುಖ್ಯ ಇಂಜಿನಿಯರ್, ಸಂಕ(ದ), ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ದಿನಾಂಕ 21.6.2010ರಂದು ನೀಡಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಚರ್ಚಿಸಿ ಪ್ರಾಯೋಗಿಕ ಅಗತ್ಯಕ್ಕೆ ತಕ್ಕಂತೆ ದಿನಾಂಕ 22.2.2010ರ ಆದೇಶದಲ್ಲಿ ಕೆಲವೊಂದು ಅಂಶಗಳನ್ನು ಹೊಸದಾಗಿ ಸೇರಿಸಿ, ಕೆಲವೊಂದು ಅಂಶಗಳಿಗೆ ತಿದ್ದುಪಡಿ ಮಾಡಿ ಸದರಿ ಆದೇಶವನ್ನು ಪರಿಷ್ಕರಿಸಲು ತೀರ್ಮಾನಿಸಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರದ ಆದೇಶ ಸಂಖ್ಯೆ: ಲೋಇ 137 ಸೇಇವಿ 2009 ದಿನಾಂಕ 22.2.2010ರ ಆದೇಶವನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಲೋಇ 243 ಸೇಇವಿ 2013, ಬೆಂಗಳೂರು, ದಿನಾಂಕ 22.07.2014

ಲೋಕೋಪಯೋಗಿ ಇಲಾಖೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗುಣ ನಿಯಂತ್ರಣ (QUALITY CONTROL) ಅಧಿಕಾರಿಗಳು / ಕಛೇರಿ ಇತ್ಯಾದಿಗಳ ಹೆಸರನ್ನು ಗುಣ ಭರವಸೆ (QUALITY ASSURANCE) ಎಂದು ಸರ್ಕಾರದ ಆದೇಶ ಸಂಖ್ಯೆ: ಲೋಇ 137 ಸೇಇವಿ 2009 ದಿನಾಂಕ 22.2.2010 ರಲ್ಲಿ ಪುನರ್‌ನಾಮಾಂಕಿತಗೊಳಿಸಿ, ಸಂಬಂಧಿಸಿದ ಅಧಿಕಾರಿಗಳಿಗೆ ನಿಗದಿಗೊಳಿಸಿರುವ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಪುನರ್‌ಪರಿಶೀಲಿಸಿ ಈ ಕೆಳಕಂಡಂತೆ ಪರಿಷ್ಕರಿಸಿದೆ.

(I) ಗುಣ ಭರವಸೆ ಅಧಿಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳು

(1) ಅಧೀಕ್ಷಕ ಇಂಜಿನಿಯರ್, ಗುಣ ಭರವಸೆ ವೃತ್ತ:

(1) ಅಧೀಕ್ಷಕ ಇಂಜಿನಿಯರ್, ಗುಣ ಭರವಸೆ ವೃತ್ತ ಇವರು ಸಂಬಂಧಪಟ್ಟ ವಲಯದ ಮುಖ್ಯ ಇಂಜಿನಿಯರ್‌ರವರ ಅಧೀನದಲ್ಲಿ ಮತ್ತು ಮಾರ್ಗದರ್ಶನದಲ್ಲಿ ಕಾರ್ಯಭಾರ ನಿರ್ವಹಿಸುವುದು.

(2) ಇವರ ಕಾರ್ಯವ್ಯಾಪ್ತಿಯು ಆಯಾ ವಲಯದ ಭೌಗೋಳಿಕ ಪ್ರದೇಶದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯು ಕೈಗೊಳ್ಳುವ ರಸ್ತೆ, ಸೇತುವೆ, ಕಟ್ಟಡ ಇತ್ಯಾದಿ ಕಾಮಗಾರಿಗಳ ನಿರ್ಮಾಣವು ನಿಗದಿತ ಗುಣಮಟ್ಟಕ್ಕೆ ಪೂರಕವಾಗುವಂತೆ ಅನುಮೋದಿತ ಅಂದಾಜು ಪಟ್ಟಿ, ಗುತ್ತಿಗೆ ಕರಾರಿನಲ್ಲಿ ವಿಶಿಷ್ಟ ವಿವರಣೆಗಳನ್ವಯ ಮತ್ತು BIS, IRC, NBC, IBC ಹಾಗೂ ಇತರೆ ಮನ್ನಣೆ ಪಡೆದ ಮಾನಕ ಸಂಸ್ಥೆಗಳು ನಿಗದಿಪಡಿಸಿರುವ ಸಂಹಿತೆಗಳು : ಗುಣ ಭರವಸೆ ಮ್ಯಾನುಯೆಲ್ ಅನ್ವಯ ಬಳಸಲಾಗುವ ಕಚ್ಚಾ ಸಾಮಗ್ರಿಗಳ ಗುಣಮಟ್ಟ ಹಾಗೂ ನಿರ್ಮಾಣ ಕಾರ್ಯವಿಧಾನಗಳ ಬಗ್ಗೆ ಆಯ್ದ ರೀತಿಯಲ್ಲಿ (Ramdam Base) ಪರಿಶೀಲನೆ ನಡೆಸುವ ಹಾಗೂ ತಾಂತ್ರಿಕ ಸಲಹೆ, ಸೂಚನೆ, ಮಾರ್ಗದರ್ಶನನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

(3) ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಕಾರ್ಯಪಾಲಕ ಇಂಜಿನಿಯರ್ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರುಗಳ ಸಭೆಯನ್ನು ಪ್ರತಿ ತಿಂಗಳು ಕಡ್ಡಾಯವಾಗಿ ನಡೆಸಿ ಕಾಮಗಾರಿಗಳ ಗುಣಮಟ್ಟ ವರ್ಧನೆಗೆ ಅಳವಡಿಸಲಾಗುತ್ತಿರುವ ಕ್ರಮಗಳ ಬಗ್ಗೆ ಪರಿಶೀಲಿಸುವುದು.

(4) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿ ನಿರ್ವಹಿಸಲಾಗುವ ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯ ಕಾಮಗಾರಿಗಳ ಗುಣ ಭರವಸೆಯ ಬಗ್ಗೆ ಮೇಲ್ವಿಚಾರಣೆ ಮತ್ತು ಪರಿಶೀಲನೆಯನ್ನು Random ಆಧಾರದ ಮೇಲೆ ಕೈಗೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

(5) ತಾವು ಪರಿವೀಕ್ಷಣೆ ನಡೆಸಿದ ಬಗ್ಗೆ ತಾಂತ್ರಿಕ ಟಿಪ್ಪಣಿಗಳ ಪ್ರತಿಗಳನ್ನು ಸರ್ಕಾರಕ್ಕೆ ಹಾಗೂ ಮುಖ್ಯ ಇಂಜಿನಿಯರ್‌ರವರಿಗೆ ಸಲ್ಲಿಸುವುದರೊಂದಿಗೆ ಗುಣ ಭರವಸೆ ಘಟಕದ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಂಬಂಧಪಟ್ಟ ಕಾಮಗಾರಿ ವೃತ್ತದಲ್ಲಿನ ಅಧೀಕ್ಷಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಛೇರಿಗೆ ಸಲ್ಲಿಸುವುದು.

(6) ತಮ್ಮ ಪರಿವೀಕ್ಷಣೆಯ ಸಮಯದಲ್ಲಿ ನಿರ್ವಹಿಸಲಾದ ಕಾಮಗಾರಿ ಅಂಶಗಳಲ್ಲಿನ ನ್ಯೂನತೆಗಳನ್ನು ಗಮನಿಸಿದ ಸಂಧರ್ಬಗಳಲ್ಲಿ ತಾಂತ್ರಿಕ ಸಮರ್ಪಕತೆಯಲ್ಲಿ ಅವುಗಳನ್ನು ಸರಿಪಡಿಸಲು ಅಥವಾ ಮರುನಿರ್ವಹಿಸಲು ಸೂಚಿಸುವುದರೊಂದಿಗೆ ಸಂಬಂಧಪಟ್ಟ ನಿರ್ಮಾಣ ಘಟಕದ ಇಂಜಿನಿಯರುಗಳು ಸೂಕ್ತ ಕ್ರಮ ಕೈಗೊಂಡಿರುವ ಬಗ್ಗೆ ಆಯಾ ನಿರ್ಮಾಣ ವಿಭಾಗಗಳ ಕಾರ್ಯಪಾಲಕ ಇಂಜಿನಿಯರುಗಳು ಸಲ್ಲಿಸಲಾದ ಪೂರಕ ದಾಖಲೆಗಳನ್ನೊಳಗೊಂಡ ಪಾಲನಾ ವರದಿಗಳು ಸಮಂಜಸವಾಗಿರುವ ಬಗ್ಗೆ ಪರಿಶೀಲಿಸಿಕೊಳ್ಳುವುದು.

(7) ತಮ್ಮ ಕಾರ್ಯವ್ಯಾಪ್ತಿಯಲ್ಲಿ ಗುಣ ಭರವಸೆ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಉಪ ವಿಭಾಗದ ಮಟ್ಟದಲ್ಲಿರುವ ಆಡಳಿತಾತ್ಮಕ ಹಾಗೂ ತಾಂತ್ರಿಕ ಅಡಚಣೆಗಳ ನಿವಾರಣೆಗಾಗಿ ಮೇಲಾಧಿಕಾರಿಗಳ ಸಹಮತಿಯೊಂದಿಗೆ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಲು ಪ್ರಾಧಾನ್ಯತೆ ನೀಡುವುದು. ಗುಣ ಭರವಸೆ ಇಂಜಿನಿಯರುಗಳನ್ನು ತಾಂತ್ರಿಕ ಜ್ಞಾನಾಭಿವೃದ್ಧಿಗಾಗಿ ನಿಯಮಿತವಾದ ತರಬೇತಿ ಕಾರ್ಯಾಗಾರಗಳಿಗೆ ಕಡ್ಡಾಯವಾಗಿ ನಿಯೋಜಿಸಲು ಸೂಕ್ತ ಯೋಜನೆ ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದು. ಪ್ರತಿ ಮಾಸಿಕ ಸಭೆಯ ನಡವಳಿಯ ಪ್ರತಿಯನ್ನು ಮುಖ್ಯ ಇಂಜಿನಿಯರ್ ಹಾಗೂ ಸರ್ಕಾರಕ್ಕೆ ಸಲ್ಲಿಸುವುದು.

(8) ಮುಖ್ಯ ಇಂಜಿನಿಯರ್‌ರವರ ಮಟ್ಟದಲ್ಲಿ ನಡೆಯುವ ಮಾಸಿಕ ಪ್ರಗತಿ ಪರಿಶೀಲನೆ ಸಭೆಯಲ್ಲಿ ಭಾಗವಹಿಸಿ ವಲಯದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಗುಣಮಟ್ಟ, ಭರವಸೆ ಬಗ್ಗೆ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ಗುಣ ಭರವಸೆ ಅಧಿಕಾರಿಗಳ ಪರಿವೀಕ್ಷಣಾ ಟಿಪ್ಪಣಿಗಳಿಗೆ ಬಾಕಿ ಇರುವ ಪಾಲನಾ ವರದಿಗಳ ಬಗ್ಗೆ ಮುಖ್ಯ ಇಂಜಿನಿಯರ್‌ರವರ ಗಮನಕ್ಕೆ ತರತಕ್ಕದ್ದು.

(9) ಆಯಾ ಆರ್‌ಎಂಸಿ/ಹಾಟ್‌ಮಿಕ್ಸ್ ಪ್ಲಾಂಟ್‌ಗಳನ್ನು ಖುದ್ದು ಸಂಪರ್ಕಿಸಿ, ಜಲ್ಲಿ ಸಿಮೆಂಟ್, ಮರಳು ಬಳಸುವ ನೀರು ಮತ್ತು ಡಾಂಬರನ್ನು ಪರಿಶೀಲಿಸಿ ಪರಿಮಾಣ ಮತ್ತು ಗುಣಮಟ್ಟದ ಬಗ್ಗೆ ಸೂಕ್ತ ನಿರ್ದೇಶನ ನೀಡತಕ್ಕದ್ದು.

(9) ತಮ್ಮ ಪರಿವೀಕ್ಷಣೆಯ ಸಮಯದಲ್ಲಿ ನಿರ್ವಹಿಸಲಾದ ಕಾಮಗಾರಿ ಅಂಶಗಳಲ್ಲಿ ನ್ಯೂನ್ಯತೆಗಳನ್ನು ಗಮನಿಸಿದ ಸಂದರ್ಭಗಳಲ್ಲಿ ತಾಂತ್ರಿಕ ಸಮರ್ಪಕತೆಯಲ್ಲಿ ಅವುಗಳನ್ನು ಸರಿಪಡಿಸಲು ಅಥವಾ ಮರುನಿರ್ವಹಿಸಲು ಸೂಚಿಸುವದರೊಂದಿಗೆ ಸಂಬಂಧಪಟ್ಟ ನಿರ್ಮಾಣ ಘಟಕದ ಇಂಜಿನಿಯರ್‌ಗಳು ಸೂಕ್ತ ಕ್ರಮ ಕೈಗೊಂಡಿರುವ ಬಗ್ಗೆ ಆಯಾ ನಿರ್ಮಾಣ ವಿಭಾಗಗಳ ಕಾರ್ಯಪಾಲಕ ಇಂಜಿನಿಯರುಗಳು ಸಲ್ಲಿಸಲಾದ ಪೂರಕ ದಾಖಲೆಗಳನ್ನೊಳಗೊಂಡ ಪಾಲನಾ ವರದಿಗಳ ಔಚಿತ್ಯವನ್ನು ಪರಿಶೀಲಿಸಿಕೊಳ್ಳುವದು.

(10) ತಮ್ಮ ಕಾರ್ಯವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಪ್ರಮುಖ ಕಾಮಗಾರಿಗಳನ್ನು ಪ್ರಾಧಾನ್ಯತೆ ಹಾಗೂ ಅಂದಾಜುಮೊತ್ತದ ಆಧಾರದ ಮೇಲೆ ಸ್ವಯಂ-ಆಯ್ಕೆ ಮಾಡಿಕೊಂಡು ಪರಿವೀಕ್ಷಣೆ ನಡೆಸುವ ಗುರಿಹೊಂದಬೇಕಿದ್ದು, ಪ್ರತಿ ಮಾಸಿಕದಲ್ಲಿ ಪರಿವೀಕ್ಷಣೆಗೊಳಪಡಿಸುವ ಅಂತಹ ಕಾಮಗಾರಿಗಳ ಒಟ್ಟು ಸಂಖ್ಯೆಯು ಆಯಾ ಆರ್ಥಿಕ ವರ್ಷದಲ್ಲಿ ಮಾಸಿಕ ಸರಾಸರಿ **20**ಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಸ್ಥಾನಿಕ ಪ್ರಯೋಗಾಲಯಗಳಲ್ಲಿ ನಿರ್ಮಾಣ ಘಟಕದ ಇಂಜಿನಿಯರುಗಳು, ಮಾನಕ ಸಂಸ್ಥೆಗಳು/ಗುಣಭರವಸೆ ಮ್ಯಾನುಯಲ್ ಅನ್ವಯ ನಿಗದಿಪಡಿಸಿದ ಆವರ್ತನಕ್ಕನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ಪರೀಕ್ಷೆಗಳನ್ನು ಕೈಗೊಂಡು ನಿಗದಿತ ವಹಿಗಳಲ್ಲಿ ದಾಖಲಿಸಿರುವ ಬಗ್ಗೆ ಪರಿವೀಕ್ಷಣೆ ಸಮಯದಲ್ಲಿ ಪರಿಶೀಲಿಸತಕ್ಕದ್ದು.

(11) ನಿರ್ಮಾಣ ಘಟಕದ ಕಾರ್ಯನಿರ್ವಾಹಕ ಇಂಜಿನೀಯರವರು ಸಲ್ಲಿಸಲಾದ ರೂ.5.00(ಐದು) ಕೋಟಿವರೆಗಿನ ಕಾಮಗಾರಿಗಳ ಗುಣಭರವಸೆ ಯೋಜನೆ/ಕಾರ್ಯಕ್ರಮಗಳನ್ನು ಪರಿಶೀಲಿಸಿ ಅನುಮೋದಿಸುವ ಜವಾಬ್ದಾರಿ ಹೊಂದಿರುತ್ತಾರೆ.

(12) ತಮ್ಮ ಕಾರ್ಯವ್ಯಾಪ್ತಿಯಲ್ಲಿನ ರೂ.3:00 (ಮೂರು) ಕೋಟಿಯಿಂದ ರೂ.5.00(ಐದು)ಕೋಟಿ ಅಂದಾಜು ಮೊತ್ತದ ಕಾಮಗಾರಿಗಳಿಗೆ (ನಿರ್ವಹಣಾ ಕಾಮಗಾರಿಗಳನ್ನು ಹೊರತುಪಡಿಸಿ) ಅಂತಿಮ ಬಿಲ್ಲನ್ನು ಪರಿಗಣಿಸುವಲ್ಲಿ ಸಂಬಂಧಪಟ್ಟ ನಿರ್ಮಾಣ ಘಟಕದ ಕಾರ್ಯಪಾಲಕ ಇಂಜಿನಿಯರುಗಳು ಅಂತಹ ಕಾಮಗಾರಿಗಳಲ್ಲಿ ಸಮಯೋಚಿತವಾಗಿ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ಸ್ಥಾಪಿತ ನಿರ್ಮಾಣ ಪದ್ಧತಿಗಳಂತೆ ನಿರ್ವಹಿಸಿರುವ ಬಗ್ಗೆ ದೃಢೀಕರಿಸಿ, ಅಳತೆಗಳ ಪರಿಶೀಲನೆಯನ್ನು ಕಡ್ಡಾಯವಾಗಿ ಕೈಗೊಂಡ ನಂತರ ಗುಣಭರವಸೆ ಘಟಕದ ಅಭಿಪ್ರಾಯಕ್ಕಾಗಿ ಕೋರಿಕೆಯನ್ನು ಸಲ್ಲಿಸತಕ್ಕದ್ದು. ಸದರಿ ಕೋರಿಕೆಯನ್ನು ಆಧರಿಸಿ, ಸೂಕ್ತ ಪರಿಶೀಲನೆ ನಂತರ ಗುಣಭರವಸೆ ಘಟಕವು ಅಂತಿಮ ಬಿಲ್ಲು ಪಾವತಿ ಬಗ್ಗೆ ಅಭಿಪ್ರಾಯ ನೀಡತಕ್ಕದ್ದು.

(13) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ರಾಜ್ಯಹೆದ್ದಾರಿ ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಲ್ಲಿನ ಅಥವಾ ಕಾಮಗಾರಿಗಳ ಗುಣಭರವಸೆಗಾಗಿ ಸಮಾಲೋಚಕರನ್ನು ನೇಮಿಸಿದ್ದರೂ : ನೇಮಿಸದಿದ್ದರೂ ಸಹ ಸರ್ಕಾರದಿಂದ ನಿರ್ದೇಶಿಸಲ್ಪಟ್ಟ ಯಾವುದೇ ಕಾಮಗಾರಿ : ಯೋಜನೆಯಡಿಯಲ್ಲಿನ ಸದರಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಅಗತ್ಯವಿದ್ದಲ್ಲಿ ರ್‍ಯಾಂಡಮ್ ಆಧಾರದಲ್ಲಿ ಮೇಲುಸ್ತುವಾರಿ ನಡೆಸತಕ್ಕದು.

(III) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗುಣ ಭರವಸೆ ಉಪವಿಭಾಗ

(1) ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಗುಣ ಭರವಸೆ ವಿಭಾಗ ಇವರ ಮಾರ್ಗದರ್ಶನ ಮತ್ತು ಅಧೀನದಲ್ಲಿ ಕಾರ್ಯನಿರ್ವಹಿಸತಕ್ಕದ್ದು.

(2) ತಮ್ಮ ಕಾರ್ಯವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯು ಕೈಗೊಳ್ಳುವ ರಸ್ತೆ, ಸೇತುವೆ, ಕಟ್ಟಡ ಇತ್ಯಾದಿ ಕಾಮಗಾರಿಗಳ ನಿರ್ಮಾಣವು ನಿಗದಿತ ಗುಣಮಟ್ಟಕ್ಕೆ ಪೂರಕವಾಗುವಂತೆ ಅನುಮೋದಿತ ಅಂದಾಜು ಪಟ್ಟಿ/ಗುತ್ತಿಗೆ ಕರಾರಿನಲ್ಲಿನ ವಿಶಿಷ್ಟ ವಿವರಣೆಯನುಸಾರ ಬಳಸಲಾಗುವ ಕಚ್ಚಾ ಸಾಮಗ್ರಿಗಳ ಗುಣಮಟ್ಟ ಹಾಗೂ ನಿರ್ಮಾಣ ಕಾರ್ಯವಿಧಾನಗಳ ಬಗ್ಗೆ ರ್‍ಯಾಂಡಂ ಆಧಾರದಲ್ಲಿ ಪರಿಶೀಲನೆ ನಡೆಸುವ ಹಾಗೂ ತಾಂತ್ರಿಕ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

(3) ನಿರ್ಮಾಣ ಉಪವಿಭಾಗಗಳ ಕೋರಿಕೆ ಪತ್ರಗಳಿಗನುಗುಣವಾಗಿ ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಅಂದಾಜು ಪಟ್ಟಿ/ಗುತ್ತಿಗೆ ಕರಾರಿನಲ್ಲಿ ನಿಗದಿಪಡಿಸಲಾದ ವಿಶಿಷ್ಟ ವಿವರಣೆಗಳನ್ವಯ ಮತ್ತು BIS, IRC, NBC , IBC ಹಾಗೂ ಇತರೆ ಮನ್ನಣೆ ಪಡೆದ ಮಾನಕ ಸಂಸ್ಥೆಗಳು/ಗುಣಭರವಸೆ ಮ್ಯಾನುಯಲ್‌ನಲ್ಲಿ ನಿಗದಿಪಡಿಸಿರುವ ಸಂಹಿತೆಗಳನ್ವಯ ಲಭ್ಯವಿರುವ ಪರೀಕ್ಷಾ ಸಾಧನಗಳಿಂದ ರ್‍ಯಾಂಡಮ್ ಆಧಾರದಲ್ಲಿ ಆವಶ್ಯವಿರುವ ಗುಣಪರೀಕ್ಷೆಗಳಿಗೆ ಒಳಪಡಿಸುವದು.

ಸ್ಥಾನಿಕ ಪ್ರಯೋಗಾಲಯಗಳಲ್ಲಿ ನಿರ್ಮಾಣ ಘಟಕದ ಇಂಜಿನಿಯರುಗಳು, ಮಾನಕ ಸಂಸ್ಥೆಗಳು/ಗುಣಭರವಸೆ ಮ್ಯಾನುಯಲ್ ಅನ್ವಯ ನಿಗದಿಪಡಿಸಲಾದ ಆವರ್ತನಕ್ಕನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ಪರೀಕ್ಷೆಗಳನ್ನು ಕೈಗೊಂಡು ನಿಗದಿತ ವಹಿಗಳಲ್ಲಿ ದಾಖಲಿಸಿರುವ ಬಗ್ಗೆ ಪರಿವೀಕ್ಷಣೆ ಸಮಯದಲ್ಲಿ ಪರಿಶೀಲಿಸತಕ್ಕದ್ದು. ಗುಣಭರವಸೆ ಇಂಜಿನಿಯರುಗಳು ಸಹ ನಿಗದಿತ ಆವರ್ತನದ ಶೇ 10 ರಷ್ಟು ಪ್ರಮಾಣದಲ್ಲಿ ಪ್ರಮುಖ ಪರೀಕ್ಷೆಗಳನ್ನು ಕೈಗೊಂಡು, ಗುಣಪರೀಕ್ಷಾ ಫಲಿತಾಂಶ ವರದಿಗಳ ಪ್ರತಿಗಳನ್ನು ಗುಣಭರವಸೆ ಘಟಕದ ಅಧೀಕ್ಷಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್ ಹಾಗೂ ನಿರ್ಮಾಣ ಘಟಕದ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ವಿಳಂಬವಿಲ್ಲದೇ ಸಮರ್ಥನೀಯವಾದ ಅವಧಿಯೊಳಗೆ ಒದಗಿಸತಕ್ಕದ್ದು. ವಿಶೇಷ ಸಂದರ್ಭಗಳಲ್ಲಿ, ಗುಣಪರೀಕ್ಷಾ ವರದಿಗಳನ್ನು ಅಗತ್ಯವಿದ್ದಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳಿಂದ ಪರಿಶೀಲನೆ/ಅನುಮೋದನೆ ಪಡೆಯತಕ್ಕದ್ದು.

(4) ತಮ್ಮ ಅಧೀನದಲ್ಲಿನ ಗುಣಭರವಸೆ ಸಹಾಯಕ/ಕಿರಿಯ ಇಂಜಿನಿಯರ್‌ಗಳು ಕಾಮಗಾರಿ ಸ್ಥಳದಲ್ಲಿ ಕಚ್ಚಾ ಸಾಮಗ್ರಿಗಳ ಮಾದರಿಗಳನ್ನು (ಕಾಂಕ್ರೀಟ್ ಘನಗಳನ್ನು ಹೊರತುಪಡಿಸಿ) ರ್‍ಯಾಂಡಮ್ ಆಧಾರದಲ್ಲಿ ಖುದ್ದು ಸಂಗ್ರಹಿಸಿ ಸ್ಥಾನಿಕವಾಗಿ/ಪ್ರಯೋಗಾಲಯದಲ್ಲಿ ನಿಯಮಾವಳಿಗಳನ್ವಯ ಪರೀಕ್ಷೆಗೊಳಪಡಿಸುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು. ಕಾರ್ಯಭಾರ ಹೆಚ್ಚಿರುವ ಸಂದರ್ಭಗಳಲ್ಲಿ ಮಾತ್ರ ಮೇಲಾಧಿಕಾರಿಗಳ ಸಹಮತಿಯೊಂದಿಗೆ ಸಂಬಂಧಪಟ್ಟ ನಿರ್ಮಾಣ ಉಪವಿಭಾಗದ ಅಧಿಕೃತವಾಗಿ ಸಂದಾಯಗೊಂಡ ಮಾದರಿಗಳನ್ನು

(5) ಪರೀಕ್ಷೆಗೊಳಪಡಿಸಬಹುದಾಗಿದ್ದು, ಪ್ರಯೋಗಾಲಯದಲ್ಲಿ/ಕಾಮಗಾರಿ ಸ್ಥಳದಲ್ಲಿ ಕೈಗೊಂಡ ಪರೀಕ್ಷೆಗಳಿಗೆ ಗುಣಭರವಸೆ ಶಾಖಾಧಿಕಾರಿಗಳೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಶಾಖಾಧಿಕಾರಿಗಳು ನಡೆಸುವ ಒಟ್ಟು ಪರೀಕ್ಷೆಗಳಲ್ಲಿ ಕನಿಷ್ಟ 10% ರಷ್ಟು ಸಂಖ್ಯೆಯ ಪರೀಕ್ಷೆಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ಮೇಲುಸ್ತುವಾರಿ ನಡೆಸಿ ಆ ಬಗ್ಗೆ ವರದಿಗಳಲ್ಲಿ ಸೂಕ್ತವಾಗಿ ದಾಖಲಿಸತಕ್ಕದ್ದು. ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿ ಸಾಮಗ್ರಿಗಳನ್ನು ಸಂಗ್ರಹಿಸಲಾದ ಬಗ್ಗೆ/ಪರೀಕ್ಷಿಸಲಾದ ಬಗ್ಗೆ ಜಿಪಿಎಸ್ ಒಳಗೊಂಡ ಛಾಯಾ ಚಿತ್ರಗಳ ಮೂಲಕ ಅಥವಾ ವಿದ್ಯುನ್ಮಾನ ಸ್ವರೂಪದಲ್ಲಿ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ತಮ್ಮ ಕಾರ್ಯಕ್ಷೇತ್ರದಲ್ಲಿ ಉಪಲಬ್ಧವಿರುವ ಮೂಲಭೂತ ಸೌಕರ್ಯಗಳ ಮಿತಿಯಲ್ಲಿ ಸಾಧ್ಯವಾಗದ ಪರೀಕ್ಷೆಗಳನ್ನು ನೊಂದಾಯಿತ/ಮನ್ನಣೆ ಪಡೆದ ಖಾಸಗಿ ಪ್ರಯೋಗಾಲಯಗಳಲ್ಲಿ ಸಂಬಂಧಪಟ್ಟ ನಿರ್ಮಾಣ ಉಪವಿಭಾಗದವರ ಮೂಲಕ ಕೈಗೊಳ್ಳಬಹುದಾಗಿದೆ.

(6) ಆಯ್ದ ಆರ್‌ಎಂಸಿ/ಹಾಟ್‌ಮಿಕ್ಸ್ ಪ್ಲಾಂಟ್‌ಗಳನ್ನು ಖುದ್ದು ಸಂಪರ್ಕಿಸಿ, ಜಲ್ಲಿ, ಸಿಮೆಂಟ್, ಮರಳು, ಬಳಸುವ ನೀರು ಮತ್ತು ಡಾಂಬರನ್ನು ಪರಿಶೀಲಿಸಿ, ಪರಿಮಾಣ ಮತ್ತು ಗುಣಮಟ್ಟದ ಬಗ್ಗೆ ಸೂಕ್ತ ನಿರ್ದೇಶನ ನೀಡತಕ್ಕದ್ದು.

(7) ತಾವು ಪರಿವೀಕ್ಷಣೆ ನಡೆಸಿದ ಬಗ್ಗೆ ತಾಂತ್ರಿಕ ಟಿಪ್ಪಣಿಗಳ ಪ್ರತಿಗಳನ್ನು ಸರ್ಕಾರ ಹಾಗೂ ಮುಖ್ಯ ಇಂಜನಿಯರವರಿಗೆ ಸಲ್ಲಿಸುವದರೊಂದಿಗೆ ಗುಣಭರವಸೆ ಘಟಕದ ಅಧೀಕ್ಷಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್ ಮತ್ತು ಸಂಬಂಧಪಟ್ಟ ಕಾಮಗಾರಿ ವೃತ್ತದಲ್ಲಿನ ಅಧೀಕ್ಷಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಒದಗಿಸುವುದು.

(8) ಗುಣಭರವಸೆ ಉಪವಿಭಾಗದಿಂದ ನೀಡಲ್ಪಡುವ ಎಲ್ಲಾ ಗುಣಪರೀಕ್ಷಾ ವರದಿಗಳು ಅಧಿಕೃತ ಮಾನಕ ಸಂಸ್ಥೆಗಳು ಕಾಲಕಾಲಕ್ಕೆ ನಿಗದಿಪಡಿಸುವ ವಿವರಣೆಗಳಿಗೆ ಪೂರಕವಾಗಿರತಕ್ಕದ್ದು. ಸದರಿ ವರದಿಗಳನ್ನು ಕ್ರಮಬದ್ಧವಾಗಿ ಕಾಮಗಾರಿವಾರು ಹಾಗೂ ಪರೀಕ್ಷಾವಾರು ಪ್ರತ್ಯೇಕ ವಹಿಗಳಲ್ಲಿ ದಾಖಲಿಸತಕ್ಕದ್ದು.

(9) ತಮ್ಮ ಕಾರ್ಯವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಪ್ರಮುಖ ಕಾಮಗಾರಿಗಳನ್ನು ಪ್ರಾಧಾನ್ಯತೆ ಹಾಗೂ ಅಂದಾಜುಮೊತ್ತದ ಆಧಾರದ ಮೇಲೆ ಸ್ವಯಂ-ಆಯ್ಕೆ ಮಾಡಿಕೊಂಡು ಪರಿವೀಕ್ಷಣೆ ನಡೆಸುವ ಗುರಿಹೊಂದಬೇಕಿದ್ದು, ಪ್ರತಿ ಮಾಸಿಕದಲ್ಲಿ ಪರಿವೀಕ್ಷಣೆಗೊಳಪಡಿಸುವ ಅಂತಹ ಕಾಮಗಾರಿಗಳ ಒಟ್ಟು ಸಂಖ್ಯೆಯು ಆಯಾ ಆರ್ಥಿಕ ವರ್ಷದಲ್ಲಿ ಮಾಸಿಕ ಸರಾಸರಿ 15 ಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಕಾಮಗಾರಿಗಳ ಪರಿವೀಕ್ಷಣೆ ಜೊತೆಗೆ ಸಾಮಗ್ರಿಗಳ ಮಾದರಿ ಸಂಗ್ರಹಣೆ/ಸ್ಥಾನಿಕವಾಗಿ ಸಾಮಗ್ರಿಗಳ ಗುಣಪರೀಕ್ಷೆ, ನಿರ್ಮಾಣ ಘಟಕದ ಇಂಜಿನೀಯರುಗಳಿಗೆ ಗುಣಪರೀಕ್ಷೆ ಪ್ರಕ್ರಿಯೆಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡತಕ್ಕದ್ದು. ತಮ್ಮ ಪರಿವೀಕ್ಷಣೆಯ ಸಮಯದಲ್ಲಿ ನಿರ್ವಹಿಸಲಾದ ಕಾಮಗಾರಿ ಅಂಶಗಳಲ್ಲಿ ನ್ಯೂನ್ಯತೆಗಳನ್ನು ಗಮನಿಸಿದ ಸಂದರ್ಭಗಳಲ್ಲಿ ತಾಂತ್ರಿಕ ಸಮರ್ಪಕತೆಯಲ್ಲಿ ತಪ್ಪುಗಳನ್ನು ಸರಿಪಡಿಸಲು ಅಥವಾ ಮರುನಿರ್ವಹಿಸಲು ಸೂಚಿಸುವದರೊಂದಿಗೆ ಸಂಬಂಧಪಟ್ಟ ನಿರ್ಮಾಣ ಘಟಕದ ಇಂಜಿನಿಯರ್‌ಗಳು ಸೂಕ್ತ ಕ್ರಮ ಕೈಗೊಂಡಿರುವ ಬಗ್ಗೆ ಆಯಾ ನಿರ್ಮಾಣ ವಿಭಾಗಗಳ ಕಾರ್ಯಪಾಲಕ ಇಂಜಿನಿಯರುಗಳು

(10) ಒದಗಿಸಲಾದ ಪೂರಕ ದಾಖಲೆಗಳನ್ನೊಳಗೊಂಡ ಪಾಲನಾ ವರದಿಗಳ ಔಚಿತ್ಯವನ್ನು ಪರಿಶೀಲಿಸಿಕೊಳ್ಳುವುದು.

(11) ತಮ್ಮ ಕಾರ್ಯವ್ಯಾಪ್ತಿಯಲ್ಲಿನ ರೂ.1.00 (ಒಂದು) ಕೋಟಿಯಿಂದ ರೂ.3.00 (ಮೂರು)ಕೋಟಿ ಅಂದಾಜು ಮೊತ್ತದ ಕಾಮಗಾರಿಗಳಿಗೆ (ನಿರ್ವಹಣಾ ಕಾಮಗಾರಿಗಳನ್ನು ಹೊರತುಪಡಿಸಿ) ಅಂತಿಮ ಬಿಲ್ಲನ್ನು ಪರಿಗಣಿಸುವಲ್ಲಿ ಸಂಬಂಧಪಟ್ಟ ನಿರ್ಮಾಣ ಘಟಕದ ಕಾರ್ಯಪಾಲಕ ಇಂಜಿನಿಯರುಗಳು ಅಂತಹ ಕಾಮಗಾರಿಗಳಲ್ಲಿ ಸಮಯೋಚಿತವಾಗಿ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ಸ್ಥಾಪಿತ ನಿರ್ಮಾಣ ಪದ್ಧತಿಗಳಂತೆ ನಿರ್ವಹಿಸಿರುವ ಬಗ್ಗೆ ದೃಢೀಕರಿಸಿ, ಅಳತೆಗಳ ಪರಿಶೀಲನೆಯನ್ನು ಕಡ್ಡಾಯವಾಗಿ ಕೈಗೊಂಡ ನಂತರ ಗುಣಭರವಸೆ ಘಟಕದ ಅಭಿಪ್ರಾಯಕ್ಕಾಗಿ ಕೋರಿಕೆಯನ್ನು ಸಲ್ಲಿಸತಕ್ಕದ್ದು. ಸದರಿ ಕೋರಿಕೆಯನ್ನು ಆಧರಿಸಿ, ಸೂಕ್ತ ಪರಿಶೀಲನೆ ನಂತರ ಗುಣಭರವಸೆ ಘಟಕವು ಅಂತಿಮ ಬಿಲ್ಲು ಪಾವತಿ ಬಗ್ಗೆ ಅಭಿಪ್ರಾಯ ನೀಡತಕ್ಕದ್ದು.

(12) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ರಾಜ್ಯಹೆದ್ದಾರಿ ಅಭಿವೃದ್ಧಿ ಯೋಜನೆ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಲ್ಲಿನ ಅಥವಾ ಕಾಮಗಾರಿಗಳ ಗುಣಭರವಸೆಗಾಗಿ ಸಮಾಲೋಚಕರನ್ನು ನೇಮಿಸಿದ್ದರೂ: ನೇಮಿಸದಿದ್ದರೂ ಸಹ ಸರ್ಕಾರದಿಂದ ನಿರ್ದೇಶಿಸಲ್ಪಟ್ಟ ಯಾವುದೇ ಕಾಮಗಾರಿ:ಯೋಜನೆ ಯಡಿಯಲ್ಲಿನ ಸದರಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಅಗತ್ಯವಿದ್ದಲ್ಲಿ ಆಯ್ದ ರೀತಿಯಲ್ಲಿ (ರ್‍ಯಾಂಡಂ ಆಧಾರದಲ್ಲಿ) ಮೇಲುಸ್ತುವಾರಿ ನಡೆಸತಕ್ಕದ್ದು.

II.

1) ಗುಣಭರವಸೆ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳು ಈ ಮೇಲೆ ಸೂಚಿಸಲಾದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಈ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ವಿಫಲರಾಗುವ ಅಧಿಕಾರಿಗಳು ಸಿಸಿಎ ನಿಯಮದಡಿ ಶಿಸ್ತು ಕ್ರಮಕ್ಕೆ ಗುರಿಯಾಗುತ್ತಾರೆ.

2) ಗುಣಭರವಸೆ ಇಂಜಿನಿಯರುಗಳು ಕಾಮಗಾರಿಗಳ ಪರಿವೀಕ್ಷಣೆ/ಮಾದರಿಗಳ ಸಂಗ್ರಹಣೆ ಹಾಗೂ ಪರೀಕ್ಷೆಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಕೈಗೊಂಡ ಸಂದರ್ಭದಲ್ಲಿ ಸಂಬಂಧಪಟ್ಟ ನಿರ್ಮಾಣ ಘಟಕದ ಇಂಜಿನಿಯರುಗಳು ಉಪಸ್ಥಿತಿಯೊಂದಿಗೆ ಅಗತ್ಯ ಸಹಕಾರವನ್ನು ಕಡ್ಡಾಯವಾಗಿ ನೀಡತಕ್ಕದ್ದು.

3) ಗುಣಭರವಸೆ ಅಧಿಕಾರಿಗಳಿಗೆ ಮೇಲ್ಕಂಡಂತೆ ಕರ್ತವ್ಯ ಹಾಗೂ ಹೊಣೆಗಾರಿಕೆಗಳನ್ನು ನಿಗದಿಪಡಿಸಿದ್ದರೂ ಸಹಿತ ಇಲಾಖಾ ನಿಯಮಗಳನ್ವಯ ನಿರ್ಮಾಣ ಘಟಕದ ಇಂಜಿನಿಯರುಗಳು ತಾವು ನಿರ್ಮಿಸಲಾಗುವ / ನಿರ್ವಹಿಸಲಾಗುವ ಕಾಮಗಾರಿ ಅಂಶಗಳ ಪರಿಮಾಣ ಹಾಗೂ ಗುಣಮಟ್ಟಕ್ಕೆ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ ಎಂದು ಸ್ಪಷ್ಟೀಕರಿಸಲಾಗಿದೆ.

4) ನಿರ್ಮಾಣ ಘಟಕದ ಎಲ್ಲಾ ಕಾರ್ಯಪಾಲಕ ಇಂಜಿನಿಯರವರುಗಳು ಗುತ್ತಿಗೆ ಕರಾರು ಪತ್ರದೊಂದಿಗೆ ವಿಶಿಷ್ಟ ವಿವರಗಳನ್ನೊಳಗೊಂಡ [illegible], ಕಾರ್ಯಾದೇಶ ಹಾಗೂ ಕಾಮಗಾರಿಯ ಗುಣಭರವಸೆ

ಯೋಜನೆ:ಕಾರ್ಯಕ್ರಮವನ್ನು ತಯಾರಿಸಿ (ಗುಣಭರವಸೆ ಅಧಿಕಾರಿಗಳೊಂದಿಗೆ ಸಮಾಲೋಚಿಸಿ) ಸಂಬಂಧಪಟ್ಟ ಗುಣಭರವಸೆ ಘಟಕದ ಅಧಿಕಾರಿಗಳಿಗೆ ಕೂಡಲೇ ನೀಡತಕ್ಕದ್ದು.

5) ನಿರ್ಮಾಣ ಘಟಕದ ಕಾರ್ಯಪಾಲಕ ಇಂಜಿನಿಯರುಗಳು ಮಾಸಿಕ ಪ್ರಗತಿ ಪರಿಶೀಲನಾ ವರದಿಯ ಪ್ರತಿಯನ್ನು ತಪ್ಪದೇ ಸಂಬಂಧಿಸಿದ ಗುಣ ಭರವಸೆ ಘಟಕಕ್ಕೆ ಕಳುಹಿಸುವುದು.

6) ನಿರ್ಮಾಣ ಘಟಕದ ಕಾರ್ಯಪಾಲಕ ಇಂಜಿನಿಯರ್‌ಗಳು ಗುಣಭರವಸೆ ಘಟಕದ ಅಧಿಕಾರಿಗಳು ನೀಡಿದ ಸೂಚನೆ : ಟಿಪ್ಪಣಿ ಗಳಿಗೆ ಪಾಲನಾ ವರದಿಯನ್ನು ಪರಿವೀಕ್ಷಣಾ ಟಿಪ್ಪಣಿ ತಲುಪಿದ 15 ದಿನಗಳ ಒಳಗೆ ಅಗತ್ಯವಿರುವ ಪೂರಕ ದಾಖಲೆ ಸಮೇತ ಸಂಬಂಧಿಸಿದ ಗುಣಭರವಸೆ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು.

7) ನಿರ್ಮಾಣ ಘಟಕದ ಕಾರ್ಯಪಾಲಕ ಇಂಜಿನಿಯರ್‌ಗಳು, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ ಕ್ಷೇತ್ರ ಪ್ರಯೋಗಾಲಯವನ್ನು **(field laboratory)** ಅನುಷ್ಠಾನಗೊಳಿಸಿರುವ ಬಗ್ಗೆ ಗುಣಭರವಸೆ ಘಟಕದಿಂದ ದೃಢೀಕರಣ ಪಡೆದ ನಂತರ ಮೊದಲನೇ ಚಾಲ್ತಿ ಪಾವತಿ ಪಟ್ಟಿ **(1st RA Bill)** ಯನ್ನು ಪಾವತಿ ಮಾಡತಕ್ಕದ್ದು.

ಗುಣ ಭರವಸೆ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳು ಈ ಮೇಲೆ ಸೂಚಿಸಲಾಗಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಈ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ವಿಫಲರಾಗುವ ಅಧಿಕಾರಿಗಳು ಸಿಸಿಎ ನಿಯಮಗಳಡಿ ಶಿಸ್ತು ಕ್ರಮಕ್ಕೆ ಗುರಿಯಾಗುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮರಿಯಪ್ಪ) 22/7/14
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು-ಸಿ)

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ 500 ಪ್ರತಿಗಳನ್ನು ಸರ್ಕಾರಕ್ಕೆ ಒದಗಿಸಲು ಕೋರಿದೆ.

ಪ್ರತಿ:

1) ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು
2) ಮಹಾಲೇಖಪಾಲರು (ಆಡಿಟ್) ಕರ್ನಾಟಕ, ಬೆಂಗಳೂರು

3) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ
5) ಮಾನ್ಯ ಲೋಕೋಪಯೋಗಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನಸೌಧ
8) ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ.
9) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು
10) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತುಕಟ್ಟಡಗಳು (ಉತ್ತರ) ಧಾರವಾಡ
11) ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು
12) ಎಲ್ಲಾ ಅಧೀಕ್ಷಕ ಇಂಜಿನಿಯರ್, ಗುಣ ಭರವಸೆ ವೃತ್ತ (ಗುಣ ನಿಯಂತ್ರಣ ವೃತ್ತ)
13) ಎಲ್ಲಾ ಕಾರ್ಯಪಾಲಕ ಇಂಜಿನಿಯರುಗಳು, ಗುಣ ಭರವಸೆ ವಿಭಾಗ (ಗುಣ ನಿಯಂತ್ರಣ ವಿಭಾಗ).
14) ಕಾರ್ಯಪಾಲಕ ಇಂಜಿನಿಯರ್, ಕಾಮಗಾರಿ ಉಸ್ತುವಾರಿ ಕೋಶ, ವಿಕಾಸಸೌಧ ಬೆಂಗಳೂರು
15) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಆಪ್ತ ಶಾಖೆ
16) ಸರ್ಕಾರದ ಉಪ ಕಾರ್ಯದರ್ಶಿ (ಸೇವೆಗಳು) : (ಸಂಪರ್ಕ ಮತ್ತು ಕಟ್ಟಡಗಳು), ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
17) ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಐಎಫ್ಎ ಶಾಖೆ, ವಿಕಾಸಸೌಧ
18) ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ) : (ಕಟ್ಟಡಗಳು) : (ಬಂದರುಗಳು)
19) ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು-ಎ) : (ಸೇವೆಗಳು-ಬಿ)
20) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು

ಅನುಬಂಧ -2

ಕ್ರ ಸಂ	ಕಾರ್ಯಪಡೆಯಶಿಫಾರಸ್ಸುಗಳು	ವಹಿಸಲಾಗಿರುವಕ್ರಮ
ಆಡಳಿತಾತ್ಮಕಶಿಫಾರಸ್ಸುಗಳು		
1	ಪ್ರಸ್ತುತ ಗುಣ ನಿಯಂತ್ರಣ ವ್ಯವಸ್ಥೆಯಲ್ಲಿನ ಕೊರತೆ ಹಾಗೂ ಅಸಮರ್ಪಕತೆಗಳನ್ನು ಸರಿಪಡಿಸಿ ಸರ್ಕಾರದ ಕಾಮಗಾರಿಗಳಲ್ಲಿ ಗುಣಮಟ್ಟವನ್ನು ಪರಿಣಾಮಕಾರಿಯಾಗಿ ಖಾತರೀಕರಣಗೊಳಿಸಲು "ಗುಣಭರವಸೆಸಚಿವಾಲಯ" ಸೃಜಿಸುವಅಗತ್ಯವಿದ್ದು, ಪ್ರಸಕ್ತ ಸಾಲಿನಲ್ಲಿಯೇ ಕಾರ್ಯನಿರ್ವಹಿಸುವಂತೆ ಕ್ರಮ ಜರುಗಿಸುವುದು ಅಗತ್ಯ.	**ಗುಣಭರವಸೆವಲಯವನ್ನು 2014 ನೇ ಸಾಲಿನಲ್ಲಿ ಸೃಜಿಸಲಾಗಿದೆ.**
2	ಗುಣಮಟ್ಟದ ಕಾಮಗಾರಿಗಳ ನಿರ್ಮಾಣ/ನಿರ್ವಹಣೆಗೆ ಗುಣಮಟ್ಟದ ಮಾನವ ಸಂಪನ್ಮೂಲದ ಅವಶ್ಯಕತೆ ಇರುವುದರಿಂದ ನಿಯಮಿತವಾದ ಹಾಗೂ ಕ್ರಮಬದ್ಧವಾದ ತರಬೇತಿ ಮತ್ತು ಇತರೆ ಪ್ರಕ್ರಿಯೆಗಳ ಮೂಲಕ ಮಾನವ ಸಂಪನ್ಮೂಲದ ಗುಣಮಟ್ಟ ವೃದ್ಧಿಸಲು ಕರ್ನಾಟಕ ನಿರ್ಮಾಣ ಅಕಾಡೆಮಿಯನ್ನು ರಚಿಸಿ ಪ್ರಸಕ್ತ ಸಾಲಿನಿಂದಲೇ ಕಾರ್ಯನಿರ್ವಹಿಸುವಂತೆ ಕ್ರಮ ಜರುಗಿಸುವುದು ಅಗತ್ಯ.	PRAMC-ಯೋಜನೆ, ರಸ್ತೆ ಮತ್ತು ಆಸ್ತಿ ನಿರ್ವಹಣೆ ಕೇಂದ್ರವನ್ನು ಪ್ರಧಾನ ಮುಖ್ಯ ಅಭಿಯಂತರರ ನೇತೃತ್ವದಲ್ಲಿ ಪ್ರತ್ಯೇಕವಾಗಿ ಸೃಜಿಸಲಾಗಿದೆ. ಈ ಸಂಸ್ಥೆಯ ಮೂಲಕ ಇಲಾಖೆಯ ಎಲ್ಲ ಮಟ್ಟದ ಇಂಜಿನಿಯರ್‌ಗಳಿಗೆ ತರಬೇತಿ/ಕಾರ್ಯಾಗಾರಗಳನ್ನು ಏರ್ಪಡಿಸಲಾಗುತ್ತಿದೆ.
3	ಸರ್ಕಾರದ ಯೋಜನೆ / ಕಾಮಗಾರಿಗಳನ್ನು ರೂಪಿಸುವ ಹಂತದಿಂದ ನಿರ್ಮಾಣೋತ್ತರ ಹಂತದವರೆಗಿನ ಪ್ರಕ್ರಿಯೆಗಳಲ್ಲಿ ಕಾಮಗಾರಿಗಳ ಶ್ರೇಷ್ಠತೆಯನ್ನು ಕಾಲಕಾಲಕ್ಕೆ ಮತ್ತಷ್ಟು ಉನ್ನತೀಕರಣಗೊಳಿಸಲು ಸೂಕ್ತ ಹಾಗೂ ನಿರ್ದೇಶನಾತ್ಮಕ ಸಲಹೆ / ಸೂಚನೆಗಳನ್ನು ನೀಡಲು ಅನುಕೂಲವಾಗುವಂತೆ ಶಾಸನಬದ್ಧವಾದ "ಕಾಮಗಾರಿಗಳ ಗುಣಮಟ್ಟ ಸುಧಾರಣಾ ಆಯೋಗ" ವನ್ನು ರಚಿಸಲು ಶೀಘ್ರ ಕ್ರಮ ಜರುಗಿಸುವುದು.	ಲೋಕೋಪಯೋಗಿ ಇಲಾಖೆಯ ಅಂದಾಜುಗಳನ್ನು ಪರಿಶೀಲಿಸಿ ಅಗತ್ಯ ಸೂಚನೆ ಹಾಗೂ ನಿರ್ದೇಶನ ನೀಡಲು ರಾಜ್ಯಮಟ್ಟದ ತಾಂತ್ರಿಕ ಸಲಹೆ ಹಾಗೂ ಅಂದಾಜು ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.
4	ಅಂತರರಾಜ್ಯ ನದಿ ವಿವಾದಗಳ ಪ್ರಸ್ತುತ ನ್ಯಾಯಮಂಡಳಿ (Tribunal) ಗಳಿಂದ ಸಮರ್ಪಕ ಹಾಗೂ ಕಾರ್ಯಸಾಧು ಪರಿಹಾರಗಳು ಅತ್ಯಂತ ವಿಳಂಬವಾಗುತ್ತಿದ್ದು, ಜಲಸಂಬಂಧಿತ ತಜ್ಞರುಗಳ ಪ್ರಾಧಾನ್ಯತೆಯೊಂದಿಗೆ ರಚಿಸಲಾಗಿರುವ	ನೀರಾವರಿ ಇಲಾಖೆಗೆ ಸಂಬಂಧಿಸಿದೆ.

	"ತಾಂತ್ರಿಕನ್ಯಾಯಮಂಡಳಿ" (Technical Tribunal) ರಚನೆಯಿಂದ ಮಾತ್ರ ನ್ಯಾಯೋಚಿತ ಪರಿಹಾರ ಮಾರ್ಗಗಳನ್ನು ಸಕಾರಾತ್ಮಕವಾಗಿ ನಿರೀಕ್ಷಿಸಬಹುದಾಗಿರುವುದರಿಂದ ಈ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸುವ ಅವಶ್ಯವಿರುತ್ತದೆ.	
5	ರಾಜ್ಯಕ್ಕೆ ವಿವಿಧ ಮೂಲಗಳಿಂದ ಲಭ್ಯವಾಗುವ ನೀರಿನ ಪ್ರಮಾಣ ಹಾಗೂ ವಿವಿಧ ಯೋಜನೆಗಳಿಗೆ ಬಳಕೆಯಾಗುತ್ತಿರುವ ನೀರಿನ ಪ್ರಮಾಣಗಳನ್ನು ನ್ಯಾಯೋಚಿತವಾಗಿ ಪರಾಮರ್ಶಿಸಿದರ ನಿಗದಿಯಂತಹ ಸಮರ್ಪಕ ನಿರ್ಧಾರಗಳನ್ನು ಕೈಗೊಳ್ಳಲು "ಕರ್ನಾಟಕ ಜಲ ನಿಯಂತ್ರಣ ಆಯೋಗ" ದ ಸ್ಥಾಪನೆ (Karnataka Water Regulatory Commission) ಇದನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವುದು ಅಗತ್ಯವೆಂದು ಶಿಫಾರಸ್ಸು ಮಾಡಲಾಗಿದೆ.	ನೀರಾವರಿ ಇಲಾಖೆಗೆ ಸಂಬಂಧಿಸಿದೆ.
6	ನಿರಂತರ ಹೂಳಿನ ಸಂಗ್ರಹಣೆಯಿಂದ ಜಲಾಶಯಗಳ ಸಂಗ್ರಹಣಾ ಸಾಮರ್ಥ್ಯ ಕುಗ್ಗುತ್ತಿರುವ ಹಿನ್ನೆಲೆಯಲ್ಲಿ ಜಲಾನಯನ ಪ್ರದೇಶವನ್ನು ಸೂಕ್ತ ನಿರ್ವಹಣೆಗೊಳಪಡಿಸುವುದರ ಮೂಲಕ ಹೂಳಿನಚಲನೆಯನ್ನು ನಿಯಂತ್ರಿಸಲು ಸಾಧ್ಯವಾಗುವುದರಿಂದ "ಜಲಾನಯನ ಪ್ರದೇಶ ನಿರ್ವಹಣಾವಿಧೇಯಕ" (Catchment Area Management Act) ಅನ್ನು ರೂಪಿಸಿ ತ್ವರಿತವಾಗಿ ಜಾರಿಗೊಳಿಸುವುದು ಇಂದಿನ ಅಗತ್ಯತೆಯಾಗಿದೆ.	ನೀರಾವರಿ ಇಲಾಖೆಗೆ ಸಂಬಂಧಿಸಿದೆ.
7	ಹಲವಾರು ವರ್ಷಗಳ ನಿರಂತರ ಹೂಳು ಸಂಗ್ರಹಣೆಯಿಂದಾಗಿ ಸಾಮರ್ಥ್ಯ ಕಳೆದುಕೊಂಡಿರುವ ಜಲಾಶಯಗಳನ್ನು ವ್ಯವಸ್ಥಿತ ಹಾಗೂ ಕ್ರಮಬದ್ಧ ಕಾರ್ಯಸಾಧುಯೋಜನೆಗಳ ಮೂಲಕ ಕನಿಷ್ಠ ಆರ್ಥಿಕ ವೆಚ್ಚದೊಂದಿಗೆ ನಿಯಮಿತವಾಗಿ ಹೂಳುತೆರವುಗೊಳಿಸಲು ನಿರಂತರ "ಹೂಳುತೆರವುವ್ಯವಸ್ಥೆ" ಯನ್ನು ಕಡ್ಡಾಯವಾಗಿ ಜಾರಿಗೊಳಿಸುವುದು.	ನೀರಾವರಿ ಇಲಾಖೆಗೆ ಸಂಬಂಧಿಸಿದೆ.
8	ಸರ್ಕಾರದ ಉದ್ದೇಶಿತ ಯೋಜನೆಗಳನ್ನು ವ್ಯವಸ್ಥಿತವಾಗಿ ರೂಪಿಸಿ ಕಾರ್ಯಗತಗೊಳಿಸಲು ಕಾಲಕಾಲಕ್ಕೆ ಹೊರಹೊಮ್ಮುವ ನೂತನ ತಂತ್ರಜ್ಞಾನಗಳನ್ನು ಅಳವಡಿಸಿ ಗುಣಮಟ್ಟದ	ಸುಧಾರಿತ ತಂತ್ರಜ್ಞಾನವನ್ನು ರಾಜ್ಯದ ನಿರ್ಮಾಣ ಯೋಜನೆಗಳಲ್ಲಿ ಈಗಾಗಲೇ ಅಳವಡಿಸಲಾಗಿದ್ದು ಗುಣಮಟ್ಟದ ಹಾಗೂ ವೆಚ್ಚದಲ್ಲಿ ಉಳಿತಾಯವಾಗುವಂತಹ

	ಪ್ರಾಧಾನ್ಯತೆಯೊಂದಿಗೆ ಯೋಜನಾ ವೆಚ್ಚವನ್ನು ಅತ್ಯುತ್ತಮೀಕರಣಗೊಳಿಸಲು ಅನುಕೂಲವಾಗುವಂತೆ ಕನಿಷ್ಠ ಅವಧಿಯ ನಿಯಮಿತವಾದ ಪ್ರಮಾಣೀಕೃತ ತರಬೇತಿಯನ್ನು ಪ್ರತಿಯೊಬ್ಬ ಇಂಜಿನಿಯರ್ ಕಡ್ಡಾಯವಾಗಿ ಹೊಂದುವಂತೆ ಅಗತ್ಯವಿರುವ ಸೇವಾನಿಯಮಾವಳಿಗಳನ್ನು ಸೂಕ್ತವಾಗಿ ತಿದ್ದುಪಡಿಗೊಳಿಸುವುದು.	ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ನೂತನ ತಂತ್ರಜ್ಞಾನದ ಬಗ್ಗೆ ಪರಿಚಯ ಮತ್ತು ತರಬೇತಿಯನ್ನು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಇಂಜಿನಿಯರುಗಳಿಗೆ ನೀಡಲಾಗುತ್ತಿದೆ.
9	ರಾಜ್ಯದ ಮಹಾನಗರಗಳ ವ್ಯಾಪ್ತಿಯಲ್ಲಿ ಲಭ್ಯವಾಗುವ ಮಳೆನೀರನ್ನು ಸಮರ್ಪಕವಾಗಿ ಬಳಕೆ ಮಾಡುವ ಕುರಿತು ಕಾರ್ಯಸಾಧು ವಿಧಾನಗಳನ್ನು ಅಳವಡಿಸಿ ಜಾರಿಗೆ ತರಲು ಕ್ರಮಜರುಗಿಸುವುದು.	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.
10	ರಾಜ್ಯದ ಮಹಾನಗರಗಳ ವ್ಯಾಪ್ತಿಯಲ್ಲಿ ಬೀಳುತ್ತಿರುವ ಅಗಾಧ ಪ್ರಮಾಣದ ಮಳೆ ನೀರು ಚರಂಡಿಗಳ ಮೂಲಕ ವ್ಯರ್ಥವಾಗಿ ನಗರದಿಂದ ಹೊರಕ್ಕೆ ಹೋಗುತ್ತಿದ್ದು, ಸದರಿ ನೀರನ್ನು ಸಮರ್ಥವಾಗಿ ಬಳಸಿಕೊಂಡು ನಗರದ ನೀರಿನ ಸಮಸ್ಯೆಯನ್ನು ಪರಿಹರಿಸಲು ಅನುಕೂಲವಾಗುವಂತೆ ಕೆರೆಗಳ"ಜೋಡಣೆಯೋಜನೆ" ಯನ್ನು ಆದ್ಯತೆಯ ಮೇರೆಗೆ ಜಾರಿಗೊಳಿಸುವ ತ್ವರಿತ ಕ್ರಮ ಅನಿವಾರ್ಯ.	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.
11	ಜಲಾಶಯಗಳ ಕೆಳ ಪ್ರವಾಹ ಭಾಗದಲ್ಲಿ ಉದ್ಭವವಾಗುವ ಪ್ರವಾಹ ಸಮಸ್ಯೆಗಳ ಪರಿಹಾರಕ್ಕಾಗಿ ಹಾಗೂ ಜಲಾಶಯಗಳ ಪರಿಣಾಮಕಾರಿ ನಿರ್ವಹಣೆಗಾಗಿ "ಜಲಾನಯನಕೊಳ್ಳಗಳ ನಿರ್ವಹಣಾ"(Basin Management) ವ್ಯವಸ್ಥೆಯನ್ನು ಜಾರಿಗೊಳಿಸುವುದು.	ನೀರಾವರಿ ಇಲಾಖೆಗೆ ಸಂಬಂಧಿಸಿದೆ.
12	ನಿರ್ಮಾಣ ಕ್ಷೇತ್ರದಲ್ಲಿ ವಿಶಿಷ್ಟ ಸೇವೆಸಲ್ಲಿಸಿರುವ ತಾಂತ್ರಿಕ ತಜ್ಞರುಗಳನ್ನೊಳಗೊಂಡ "Human Resources Bank"ನ್ನು ರಚಿಸಲು ಅಗತ್ಯ ಕ್ರಮ ಜರುಗಿಸುವುದು.	ರಾಜ್ಯಮಟ್ಟದ ತಾಂತ್ರಿಕ ಸಲಹೆ ಮತ್ತು ಅಂದಾಜು ಪರಿಶೀಲನೆ ಸಮಿತಿಯನ್ನು ರಚಿಸಲಾಗಿದೆ.
13	ರಾಜ್ಯದ ತಾಂತ್ರಿಕ ಅಧಿಕಾರಿಗಳು ಕೇಂದ್ರ ಸರ್ಕಾರದ ತಾಂತ್ರಿಕ ಅಧಿಕಾರಿಗಳೊಡನೆ ನಿಯಮಿತ ಸಂಪರ್ಕವಿರುವಂತೆ ವ್ಯವಸ್ಥೆಗೊಳಿಸುವುದರಿಂದ ರಾಜ್ಯದ ಅಭಿವೃದ್ಧಿಗೆ ಪೂರಕವಾದ ಯೋಜನಾ ಪ್ರಸ್ತಾವನೆಗಳ ಪ್ರಕ್ರಿಯೆಗಳನ್ನು ತ್ವರಿತಗೊಳಿಸಲು ಹಾಗೂ ಸುಲಲಿತಗೊಳಿಸಲು ಸಾಧ್ಯವಾಗಲಿದ್ದು, ಈ ಬಗ್ಗೆ ಅಗತ್ಯ ಕ್ರಮವಹಿಸುವುದು.	ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ ವಲಯದಲ್ಲಿ ಕ್ರಮ ವಹಿಸಲಾಗಿದೆ.

14	ಕಾಮಗಾರಿಗಳ ಗುಣಮಟ್ಟದ ದೃಷ್ಟಿಯಿಂದ ಕಾಮಗಾರಿಗಳ ಸಮರ್ಪಕ ಉಸ್ತುವಾರಿಗೆ ಅಗತ್ಯ ಸಮಯವನ್ನು ಲಭ್ಯಗೊಳಿಸಲು ಅನುಕೂಲವಾಗುವಂತೆ ಇಂಜಿನಿಯರುಗಳು ಸಭೆಗಳಿಗೆ ಹಾಜರಾಗುವ ಅಗತ್ಯತೆ ಹಾಗೂ ವಿನಾಯಿತಿಗಳ ಕುರಿತು ನಿಯಮ ರಚಿಸಿಜಾರಿಗೆ ತರುವುದು .	ಆನ್‌ಲೈನ್ ಸಭೆಯನ್ನು ನಡೆಸುವ ಮೂಲಕ ಇಂಜಿನಿಯರುಗಳನ್ನು ಅನಗತ್ಯವಾಗಿ ಜಿಲ್ಲಾಮಟ್ಟದ, ತಾಲ್ಲೂಕು ಮಟ್ಟದ, ರಾಜ್ಯ ಮಟ್ಟದ ಸಭೆಗಳಲ್ಲಿ ಭೌತಿಕವಾಗಿ ಹಾಜರಿರುವುದನ್ನು ತಪ್ಪಿಸಲಾಗಿದೆ.
15	ಕಾಮಗಾರಿಗಳ ಗುಣಮಟ್ಟ ಉನ್ನತೀಕರಣಕ್ಕೆ ಪೂರಕವಾಗುವಂತೆ ನಿರ್ದಿಷ್ಟ ತಾಂತ್ರಿಕ ಕ್ಷೇತ್ರದಲ್ಲಿ ತರಬೇತಿಗೊಳಪಡಿಸಿದ ಇಂಜಿನಿಯರುಗಳ ಸೇವೆಯನ್ನು ತತ್ಸಂಬಂಧಿತ ತಾಂತ್ರಿಕ ಪರಿಣಿತಿ ಪಡೆದ ಕ್ಷೇತ್ರದಲ್ಲೇ ಮುಂದುವರೆಸುವ ಬಗ್ಗೆ ಹಾಗೂ ಕೌನ್ಸಲಿಂಗ್ ಮೂಲಕ ಇಂಜಿನಿಯರುಗಳ ವರ್ಗಾವಣೆ ಪ್ರಕ್ರಿಯೆಗಳನ್ನು ಜರುಗಿಸುವಂತ ನಿಯಮಾವಳಿಗಳನ್ನು ರಚಿಸಿ ಜಾರಿಗೆ ತರುವ ಅಗತ್ಯವಿರುತ್ತದೆ.	ಕೌನ್ಸಲಿಂಗ್ ಮೂಲಕ ವರ್ಗಾವಣೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು
16	ಸರ್ಕಾರದ ಕಾಮಗಾರಿಗಳ ಗುಣಮಮಟ್ಟದ ಉನ್ನತೀಕರಣಕ್ಕೆ ಪೂರಕವಾಗಿ ನಿಯಮಿತ ತರಬೇತಿ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ತಾಂತ್ರಿಕ ಕಾರ್ಯಾಗಾರಗಳಲ್ಲಿ ಭಾಗವಹಿಸುವಿಕೆ, ಉನ್ನತ ಶಿಕ್ಷಣದ ಅಧ್ಯಯನ ಹಾಗೂ ವಿದೇಶ ಅಧ್ಯಯನ ಪ್ರವಾಸದಂತಹ ಪ್ರಕ್ರಿಯೆಗಳಲ್ಲಿ ಇಂಜಿನಿಯರುಗಳು ನಿಯಮಿತವಾಗಿ ಕಡ್ಡಾಯವಾಗಿ ಭಾಗವಹಿಸುವಂತೆ ಅಗತ್ಯ ನಿಯಮಾವಳಿಗಳನ್ನು ರಚಿಸಿ ಜಾರಿಗೆ ತರುವ ಅಗತ್ಯವಿರುತ್ತದೆ.	ಗುಣಮಟ್ಟ ಉನ್ನತೀಕರಣಕ್ಕೆ ಪೂರಕವಾದ ತರಬೇತಿಯನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ತಾಂತ್ರಿಕ ಕಾರ್ಯಾಗಾರಗಳಲ್ಲಿ ಭಾಗವಹಿಸಲು ಉನ್ನತಶಿಕ್ಷಣ, ಅಧ್ಯಯನ ಪ್ರವಾಸದಂತಹ ಪ್ರಕ್ರಿಯೆಗಳಲ್ಲಿ ನಿಯಮಿತವಾಗಿ ಭಾಗವಹಿಸಲು ಈಗಾಗಲೇ ಅವಕಾಶಕಲ್ಪಿಸಲಾಗಿದೆ.
17	ಸರ್ಕಾರದ ಕಾಮಗಾರಿಗಳನ್ನು ನಿರ್ಮಾಣ ಪೂರ್ವಹಂತದಿಂದ ನಿರ್ಮಾಣ ಪೂರ್ಣಗೊಂಡನಂತರ ವಿನ್ಯಾಸಿತ ಸೇವಾವಧಿಯವರೆಗೆ ಸದರಿ ಸ್ವತ್ತುಗಳ ಬಾಳಿಕೆ ಹಾಗೂ ಸುರಕ್ಷತೆ ದೃಷ್ಟಿಯಿಂದ ಅವುಗಳನ್ನು ರಕ್ಷಿಸಲು ಅನುಕೂಲವಾಗುವಂತೆ "ಕಾಮಗಾರಿಕಾವಲುದಳ" (Infrastructure Police) ವ್ಯವಸ್ಥೆಯನ್ನು ರೂಪಿಸುವುದು.	ಇದಕ್ಕಾಗಿ ಪ್ರತ್ಯೇಕವಾಗಿ ಮುಖ್ಯ ಇಂಜಿನಿಯರ್ ರವರ ನೇತೃತ್ವದಲ್ಲಿ "ಗುಣ ಭರವಸೆ ವಲಯ" ಸೃಜಿಸಲಾಗಿದೆ.
18	ಕಾಲಕಾಲಕ್ಕೆ ಲಭ್ಯವಾಗುವ ಆಧುನಿಕ ತಂತ್ರಜ್ಞಾನಗಳನ್ನು ಪ್ರಾಯೋಗಿಕ ಪರಿಶೀಲನೆ ನಂತರ ಸೂಕ್ತತೆಯ ಆಧಾರದ ಮೇಲೆ ಕಾಮಗಾರಿಗಳಲ್ಲಿ ಅಳವಡಿಸಿ ಅತ್ಯುತ್ತಮೀಕರಣಗೊಳಿಸಲು "ತಾಂತ್ರಿಕಸಂಶೋಧನಾಕೋಶ"(Technical Research Cell) ಯನ್ನು ಕಾಮಗಾರಿ ಗುಣಮಟ್ಟ ಸುಧಾರಣ	ಆಧುನಿಕ ತಂತ್ರಜ್ಞಾನವನ್ನು ಹಾಗೂ ಆಧುನಿಕ ಸಾಮಗ್ರಿಗಳನ್ನು ಅಳವಡಿಸಕೊಳ್ಳಲು ಈಗಾಗಲೇ ಕ್ರಮಕೈಗೊಳ್ಳಲಾಗಿದ್ದು, ಈ ಸಂಬಂಧ ನುರಿತ ತಾಂತ್ರಿಕ ತಜ್ಞರುಗಳು ಸಲಹೆ ಸೂಚನೆಗಳು ನೀಡುತ್ತಿದ್ದಾರೆ.

	ಆಯೋಗದಡಿಯಲ್ಲಿ ರಚಿಸಿ ಜಾರಿಗೆ ತರಲು ಅಗತ್ಯಕ್ರಮ ಜರುಗಿಸುವುದು.	
19	ಸರ್ಕಾರದಿಂದ ಕೈಗೊಳ್ಳಲಾಗುವ ಕಾಮಗಾರಿ ಅಂಶಗಳ ವಿನ್ಯಾಸಗಳನ್ನು ಅತ್ಯುತ್ತಮೀಕರಣಗೊಳಿಸಿ ಕಾಮಗಾರಿಗಳಲ್ಲಿ ಅಳವಡಿಸಲು ಅನುಕೂಲವಾಗುವಂತೆ ವಿನ್ಯಾಸ ವಿಭಾಗವನ್ನು ಸದೃಢಗೊಳಿಸುವುದು.	ಸಮರ್ಪಕ ವಿನ್ಯಾಸಗಳನ್ನು ಕಾಮಗಾರಿಗಳಲ್ಲಿ ಅಳವಡಿಸಿಕೊಳ್ಳಲು ಈಗಾಗಲೇ ಕ್ರಮವಹಿಸಲಾಗಿದೆ.
20	ಕಾಮಗಾರಿಗಳ ಗುಣಮಟ್ಟ ಉನ್ನತೀಕರಣಗೊಳಿಸಲು ನಿರ್ಮಾಣ ಸಾಮಗ್ರಿಗಳ ಬಳಕೆ ಹಾಗೂ ಅಳವಡಿಸಲಾಗುತ್ತಿರುವ ವಿಧಿವಿಧಾನಗಳ ಕುರಿತು ನೊಂದಾಯಿತ ಗುತ್ತಿಗೆದಾರರನ್ನು ನಿಯಮಿತವಾಗಿ ಉದ್ದೇಶಿತ ಕರ್ನಾಟಕ ನಿರ್ಮಾಣ ಅಕಾಡೆಮಿಯಡಿಯಲ್ಲಿ ಸೂಕ್ತ ತರಬೇತಿಗೊಳಪಡಿಸಲು ಕ್ರಮ ಜರುಗಿಸಬೇಕಿದೆ.	ಕಾಮಗಾರಿಗಳ ಗುಣಮಟ್ಟ ಉನ್ನತೀಕರಿಸಲು ನಿರ್ಮಾಣ ಸಾಮಗ್ರಿಗಳ ಬಳಕೆ ಹಾಗೂ ಅಳವಡಿಸಲಾಗುತ್ತಿರುವ ವಿಧಿವಿಧಾನಗಳ ಕುರಿತಂತೆ, ನೊಂದಾಯಿತ ಗುತ್ತಿಗೆದಾರರನ್ನು ನಿಯಮಿತವಾಗಿ ತರಬೇತಿಗೆ ಒಳಪಡಿಸಲು ಕ್ರಮ ಜರುಗಿಸಲಾಗುತ್ತಿದೆ.
21	ರಾಜ್ಯದ ಯೋಜಿತ ಕಾಮಗಾರಿಗಳು ನಿಗದಿಪಡಿಸಲಾದ ನಿರ್ಮಾಣ ವೆಚ್ಚ ಹಾಗೂ ಅವಧಿಯೊಳಗೆ ಗುಣಮಟ್ಟದ ಪೂರಕವಾಗಿನಿರ್ಮಿಸಲು / ನಿರ್ವಹಿಸಲು ಅನುಕೂಲವಾಗುವಂತೆ ಅರ್ಹತೆವುಳ್ಳ ಗುತ್ತಿಗೆದಾರರನ್ನು ನೋಂದಾಯಿಸಿಕೊಳ್ಳಲು ಪ್ರತ್ಯೇಕ 'ಗುತ್ತಿಗೆದಾರಪರವಾನಗಿಪ್ರಾಧಿಕಾರ' (Contractor Licensing Authority) ಅನ್ನು ರಚಿಸಲು ಕ್ರಮ ಜರುಗಿಸುವುದು.	ಯೋಜಿತ ಕಾಮಗಾರಿಗಳ ನಿಗದಿಪಡಿಸಲಾದ ನಿರ್ಮಾಣ ವೆಚ್ಚ ಹಾಗೂ ಅವಧಿಯೊಳಗೆ ನಿರ್ವಹಿಸಲು ಅನುಕೂಲವಾಗುವಂತೆ ಅರ್ಹತೆಉಳ್ಳ ಗುತ್ತಿಗೆದಾರರನ್ನುನೋಂದಾಯಿಸಿಕೊಳ್ಳಲು ಕ್ರಮವಹಿಸಲಾಗುತ್ತಿದ್ದು, ಗುತ್ತಿಗೆದಾರರಿಗೆ ಆನ್ ಲೈನ್ ಮುಖಾಂತರನೋಂದಣಿ / ನವೀಕರಣ ಮಾಡಲು ಈಗಾಗಲೇ ಕ್ರಮವಹಿಸಲಾಗಿದೆ.
22	ಸರ್ಕಾರದ ಯೋಜನೆಗಳು ಸಾರ್ವಜನಿಕರಿಗೆ ತ್ವರಿತ ಹಾಗೂ ತೃಪ್ತಿಕರ ಸೇವೆ ಒದಗಿಸಲು ಅನುಕೂಲವಾಗುವಂತೆ ನಿರ್ಮಾಣ ಕ್ಷೇತ್ರದಲ್ಲಿನ ಎಲ್ಲಾ ಪತ್ರ ವ್ಯಾವಹಾರಿಕ ಚಟುವಟಿಕೆಗಳನ್ನು ಕಾಗದ ರಹಿತವಾಗಿ ನಿರ್ವಹಿಸುವುದರ ಮೂಲಕ 2014-15 ರ ಆರ್ಥಿಕ ವರ್ಷಾಂತ್ಯಕ್ಕೆ ಸಂಪೂರ್ಣವಾಗಿ ಗಣಕೀಕರಣಗೊಳಿಸಲು ಅಗತ್ಯ ಕ್ರಮಜರುಗಿಸುವುದು.	ನಿರ್ಮಾಣ ಕ್ಷೇತ್ರದಲ್ಲಿನ ಪತ್ರ ವ್ಯವಹಾರವನ್ನು ಕಾಗದರಹಿತವಾಗಿ ನಿರ್ವಹಿಸುವ ಸಂಬಂಧ ಭಾಗಶ: ಗಣಕೀಕರಣವನ್ನು ಅನುಷ್ಠಾನಗೊಳಿಸಲಾಗಿದ್ದು, ಸಂಪೂರ್ಣ ಗಣಕೀರಣದತ್ತ ಹೆಜ್ಜೆ ಇಡಲು ಕ್ರಮವಹಿಸಲಾಗುತ್ತಿದೆ. e-office ವ್ಯವಸ್ಥೆಯನ್ನು ಈಗಾಗಲೇ ಸಚಿವಾಲಯದ ಮಟ್ಟದಲ್ಲಿ ಜಾರಿಗೆ ತರಲಾಗಿದೆ.
23	ನಿರ್ಮಾಣ ಚಟುವಟಿಕೆಗಳನ್ನುಹೊಂದಿರುವ ಸರ್ಕಾರದ ವಿವಿಧ ಇಲಾಖೆಗಳು ಕೈಗೊಳ್ಳುತ್ತಿರುವ ಯೋಜನಾ ಕಾಮಗಾರಿಗಳ ಬಗ್ಗೆ ಸಮಗ್ರವಾದ ಹಾಗೂ ತಾಂತ್ರಿಕವಾದ ಕಾರ್ಯ ಸಾಧು ನಿರ್ಧಾರಗಳನ್ನು ನಿರ್ದೇಶನಾತ್ಮಕವಾದ ಕ್ರಮಗಳ ಮೂಲಕ ಕಾರ್ಯಗತಗೊಳಿಸಲು ಹಿರಿಯ ಇಂಜಿನಿಯರ್	ಪ್ರಸ್ತುತ ಸರ್ಕಾರದ ಕಾರ್ಯದರ್ಶಿಯ ಹುದ್ದೆಯನ್ನು ಇಲಾಖೆಯ ಪ್ರಧಾನ ಮುಖ್ಯ ಇಂಜಿನಿಯರ್‌ರವರು ಕಾರ್ಯ ನಿರ್ವಹಿಸುತ್ತಿದ್ದಾರೆ.

	ರೊಬ್ಬರನ್ನು ಅಪರ ಮುಖ್ಯ ಕಾರ್ಯದರ್ಶಿಸ್ಥಾನಕ್ಕೆ ನೇಮಿಸುವುದು.	
24	ಸರ್ಕಾರದ ವಿವಿಧ ಇಲಾಖೆ/ನಿಗಮ/ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಇಂಜಿನಿಯರುಗಳಿಗೆ ಕಾರ್ಯದರ್ಶಿ ಮಟ್ಟದ ಸ್ಥಾನಮಾನ ನೀಡಲು ಅಗತ್ಯ ಆದೇಶ ಹೊರಡಿಸುವುದು.	ಸರ್ಕಾರದ ವಿವಿಧ ಇಲಾಖೆ / ನಿಗಮ / ಸಂಸ್ಥೆಗಳಲ್ಲಿ ಕಾರ್ಯ ನಿರವಹಿಸುತ್ತಿರುವ ಮುಖ್ಯಇಂಜಿನಿಯರುಗಳಿಗೆ ಪ್ರಧಾನ ಇಂಜಿನಿಯರ್ ಸ್ಥಾನಕ್ಕೆ ಬಡ್ತಿ ನೀಡಿ ಕಾರ್ಯದರ್ಶಿ ಮಟ್ಟದ ಸ್ಥಾನಮಾನ ನೀಡಲು ಈಗಾಗಲೇ ಕ್ರಮಕೈಗೊಳ್ಳಲಾಗಿದೆ.
25	ನಿರ್ಮಾಣ ಕ್ಷೇತ್ರದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಕಾರ್ಮಿಕರು, ಸೂಪರ್‌ವೈಸರ್ ಗಳು ಹಾಗೂ ತಾಂತ್ರಿಕ ಸಿಬ್ಬಂದಿಗಳ ಸುರಕ್ಷತೆಗಾಗಿ "ಸುರಕ್ಷತಾಸಂಸ್ಕೃತಿ" (Safety Culture) ಯನ್ನುಅಳವಡಿಸಿಕೊಳ್ಳಲುಅಗತ್ಯಕ್ರಮಜರುಗಿಸುವುದು.	ನಿರ್ಮಾಣ ಕ್ಷೇತ್ರದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರು, ಸೂಪರ್ ವೈಸರ್‌ಗಳು ಹಾಗೂ ತಾಂತ್ರಿಕ ಸಿಬ್ಬಂದಿಗಳ ಸುರಕ್ಷತೆಗೆ ಸಂಬಂಧಿಸಿದಂತೆ ತರಬೇತಿಯನ್ನು ನೀಡಲು ಕ್ರಮವಹಿಸಲಾಗುತ್ತಿದೆ. ಹಾಗೂ Karnataka Public Works Departmental Code-2014ರಲ್ಲಿ "Safety in construction" ಅಧ್ಯಾಯವನ್ನು ಸೇರ್ಪಡೆ ಮಾಡಲಾಗಿದೆ.
26	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಲವಾರು ಇಲಾಖೆ / ಸರ್ಕಾರಿ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುವ ಹೊಣೆಗಾರಿಕೆ ಇದ್ದು, ಸದರಿ ಯೋಜನೆಗಳನ್ನು ನಿರ್ದೇಶನಾತ್ಮಕವಾಗಿ ಕೈಗೊಳ್ಳಲು ಅನುಕೂಲವಾಗುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಹುದ್ದೆಯನ್ನು ಅಪರ ಮುಖ್ಯ ಕಾರ್ಯದರ್ಶಿ ಹುದ್ದೆಗೆ ಸಮಾನವಾಗಿ ಮೇಲ್ದರ್ಜೆಗೇರಿಸಲು ಕ್ರಮ ಜರುಗಿಸುವುದು.	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.
27	ರಾಜ್ಯದಲ್ಲಿನ ನದಿ/ತೊರೆ/ಹಳ್ಳಗಳ ಪಾತ್ರಗಳನ್ನು ಸಮರ್ಪಕ ನಿರ್ವಹಣೆಗೊಳಪಡಿಸಲು "ನದಿ-ತೊರೆ-ಕೆರೆಪಾತ್ರಗಳ ಪ್ರಾಧಿಕಾರ" (River, Stream and Tank Bed Authority) ವನ್ನು ರಚಿಸಲು ಅಗತ್ಯ ಕ್ರಮಜರುಗಿಸುವುದು.	ನೀರಾವರಿ ಇಲಾಖೆಗೆ ಸಂಬಂಧಿಸಿದೆ.
28	ರಾಜ್ಯದಲ್ಲಿ ಪ್ರಗತಿಯಲ್ಲಿರುವ ನಿರ್ಮಾಣ ಯೋಜನೆಗಳ ವಾಸ್ತವ ವಿವರಗಳು ಸಾರ್ವಜನಿಕರಿಗೆ ಸಂಪೂರ್ಣವಾಗಿ ಮಾಹಿತಿ ದೊರಕುವ ಈತಿಯಲ್ಲಿ ನಿಯಮಿತವಾಗಿ ರಾಜ್ಯಮಟ್ಟದಲ್ಲಿ ಮಾಧ್ಯಮಗಳ ಮೂಲಕ ಪ್ರಚುರಪಡಿಸಲು ಅನುಕೂಲವಾಗುವಂತೆ ಮಾಧ್ಯಮ ಪ್ರತಿನಿಧಿಗಳಿಗೆ ವಿಚಾರ ಸಂಕಿರಣಗಳನ್ನು	ಪ್ರಗತಿಯಲ್ಲಿರುವ ನಿರ್ಮಾಣ ಯೋಜನೆಗಳ ವಾಸ್ತವ ವಿವರಗಳು ಸಾರ್ವಜನಿಕರಿಗೆ ಸಂಪೂರ್ಣವಾಗಿ ಮಾಹಿತಿ ಲಭ್ಯವಾಗಬೇಕೆಂಬ ಉದ್ದೇಶದಿಂದ ಮಾಹಿತಿಯನ್ನು ಲೋಕೋಪಯೋಗಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕ್ರಮವಹಿಸಲಾಗಿದೆ.

	ಏರ್ಪಡಿಸಲು ಕ್ರಮಜರುಗಿಸುವುದು.	
29	ಮಳೆ ನೀರು ಹಾಗೂ ನೀರಿನ ಹರಿಯುವಿಕೆಯ ಬಗ್ಗೆ ನಿಖರವಾದ ಹಾಗೂ ನೈಜವಾದ ಯಥಾಕಾಲಿಕ ಮಾಹಿತಿಗಳ ಕ್ರೋಢೀಕರಣಕ್ಕೆ ಅಗತ್ಯವಿರುವ ತಾಲ್ಲೂಕು ಮಟ್ಟದ ಹವಾಮಾನ ಮಳೆ ಮಾಪನ ಕೇಂದ್ರಗಳ ಸ್ಥಾಪನೆಗೆ ಒತ್ತು ನೀಡಿ ಕ್ರಮಜರುಗಿಸುವುದು.	ನೀರಾವರಿ ಇಲಾಖೆಗೆ ಸಂಬಂಧಿಸಿದೆ.
30	ರಾಜ್ಯದಲ್ಲಿ ವಿವಿಧ ಮೂಲಗಳಿಂದ ಲಭ್ಯವಾಗುವ ನೀರನ್ನು ವಿವಿಧ ಯೋಜನೆಗಳಲ್ಲಿ ಬಳಕೆಮಾಡುತ್ತಿದ್ದು, ವಾಸ್ತವ ಹಾಗೂ ಯಥಾಕಾಲಿಕ (Real Time) ಮಾಹಿತಿಗಳನ್ನು ಕ್ರೋಢೀಕರಿಸಿ ಲಭ್ಯಗೊಳಿಸಲು ಅಗತ್ಯವಿರುವ "ಜಲಮಾಹಿತಿಕಣಜ"(Data Bank on Water) ವನ್ನು ಸ್ಥಾಪಿಸಲು ಈಗಾಗಲೇ ಕಾರ್ಯಪಡೆಯು ಪ್ರಾರಂಭಿಕಾ ಪ್ರಕ್ರಿಯೆಗಳನ್ನು ಕೈಗೊಂಡಿದ್ದು, ನಿರಂತರ ಕಾರ್ಯನಿರ್ವಹಣೆಗೆ ಪೂರಕವಾದ ಶಾಶ್ವತ ಕ್ರಮಗಳನ್ನು ಜರುಗಿಸುವುದು.	ನೀರಾವರಿ ಇಲಾಖೆಗೆ ಸಂಬಂಧಿಸಿದೆ.
31	ಖಾಸಗಿ ಕಟ್ಟಡಗಳನ್ನು ಬಾಡಿಗೆ, ಲೀಸ್ ಮಾರಾಟ ಇತ್ಯಾದಿ ಮೂಲಕ ಸಾರ್ವಜನಿಕರಿಗೆ ವಾಸಕ್ಕೆ ಅಥವಾ ಇನ್ನಿತರೆ ಕಾರಣಗಳಿಗಾಗಿ ನೀಡಿದಲ್ಲಿ ಅಂತಹ ಕಟ್ಟಡಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಕಟ್ಟಡ ನಿರ್ಮಾಣವು ಗುಣಮಟ್ಟವಿರುವ ಬಗ್ಗೆ ಸಮರ್ಥನೆಯನ್ನು ಹೊಂದಲು ಅವಶ್ಯವಿರುವ ಕಾನೂನನ್ನು ರೂಪಿಸುವುದು.	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.
32	ಕಾಮಗಾರಿಗಳ ನಿರ್ಮಾಣಪೂರ್ಣಗೊಳಿಸಲು ಅಗತ್ಯ ಅವಧಿ ಲಭ್ಯವಾಗುವಂತೆ ಕಾಮಗಾರಿಯ ಉದ್ದೇಶ ಹಾಗೂ ತಾಂತ್ರಿಕ ಅಂಶಗಳ ಪ್ರಾಧಾನ್ಯತೆಯೊಂದಿಗೆ ಉದ್ದೇಶಿತ ಯೋಜನೆಗಳನ್ನು ಸಾಕಷ್ಟು ಮುಂಚಿತವಾಗಿ ಸಿದ್ಧಪಡಿಸಲು ಅಗತ್ಯಕ್ರಮಗಳನ್ನು ಜರುಗಿಸುವುದು.	ಕ್ರಮ ವಹಿಸಲಾಗುತ್ತಿದೆ.
33	ಗುಣಮಟ್ಟದ ಕಾಮಗಾರಿ ಸಾಮಗ್ರಿಗಳ ಬಳಕೆಯನ್ನು ಖಾತರಿಪಡಿಸಿಕೊಳ್ಳಲು ಅನುಕೂಲವಾಗುವಂತೆ ನಿರ್ಮಾಣ ಸಾಮಗ್ರಿಗಳನ್ನುಸಾಗಿಸುವ ವಾಹನಗಳಿಗೆ GPS ವ್ಯವಸ್ಥೆಯನ್ನು ಅಳವಡಿಸಲು ಸಂಬಂಧಪಟ್ಟ ಇಲಾಖೆಗಳಿಗೆ ಅಗತ್ಯ ನಿರ್ದೇಶನ ನೀಡುವುದು.	ಇಲಾಖೆಯಲ್ಲಿ ಗುತ್ತಿಗೆದಾರರು ವಿಶಿಷ್ಟ ವಿವರಣೆಯಂತೆ ಕಾಮಗಾರಿಯನ್ನು ನಿರ್ವಹಿಸಬೇಕಿದ್ದು, ಉತ್ತಮ ಗುಣಮಟ್ಟದ ಖಾತ್ರಿಯಾದ ನಂತರವೇ ಬಿಲ್ಲು ಸಂದಾಯ ಮಾಡಲಾಗುತ್ತಿದೆ.
34	ನಿಗಮ/ಮಂಡಳಿ/ಇತರೆಸರ್ಕಾರದ ಸಂಸ್ಥೆಗಳ ಮೂಲಕ ನಿರ್ವಹಿಸಲಾಗುವ ಕಾಮಗಾರಿಗಳು ದೋಷರಹಿತವಾಗಿರುವಂತೆ ಸಮರ್ಪಕ ಹಾಗೂ	ಲೋಕೋಪಯೋಗಿ ಇಲಾಖೆಯು ಪ್ರಕಟಿಸುವ ದರಪಟ್ಟಿಯಲ್ಲಿ ವಿಶಿಷ್ಟ ವಿವರಣೆಯನ್ನು ಒದಗಿಸಿದ್ದು, ಅನುಷ್ಠಾನ ಸಂಸ್ಥೆ/ ನಿಗಮ/

	ಕ್ರಮಬದ್ಧ ಕಾರ್ಯವಿಧಾನಗಳನ್ನು ವಿವರಣೆಯಲ್ಲಿ ಸೂಚಿಸಿರುವಂತೆ ಕಡ್ಡಾಯವಾಗಿ ಅಳವಡಿಸಲು ಕ್ರಮಜರುಗಿಸುವುದು.	ಮಂಡಳಿಗಳು ಅದರಂತೆ ಕ್ರಮ ವಹಿಸಬೇಕಿದೆ.
35	ರಾಜ್ಯದ ಯಾವುದೇ ಭಾಗದಲ್ಲಿ ನಿರ್ಮಿಸಲಾದ / ನಿರ್ವಹಿಸಲಾದ ಕಾಮಗಾರಿ ಅಂಶಗಳ ವಾಸ್ತವ ಅಳತೆ ವಿವರಗಳನ್ನು ರಾಜ್ಯದ ಯಾವುದೇ ಸ್ಥಳದಲ್ಲಿ ಕುಳಿತು ಕಂಪ್ಯೂಟರ್ ಮೂಲಕ ವೀಕ್ಷಿಸಲು ಸಾಧ್ಯವಾಗುವಂತೆ ಒಂದು ವಿಶಿಷ್ಟ ಸಾಧನದ ಸಂಯೋಜನೆಯನ್ನು ಕಾರ್ಯಪಡೆಯು ಕೈಗೆತ್ತಿಕೊಂಡಿದ್ದು, ಸದರಿ ಸಾಧನವನ್ನು ಕಾಮಗಾರಿ ಉಸ್ತುವಾರಿ ಹೊತ್ತಿರುವ ಎಲ್ಲಾ ಇಂಜಿನಿಯರುಗಳಿಗೆ ಕಡ್ಡಾಯವಾಗಿ ಒದಗಿಸಿ ಕಾಮಗಾರಿಗಳು ಗುಣಮಟ್ಟ ಹಾಗೂ ಪಾರದರ್ಶಕತೆಯನ್ನು ಹೊಂದಲು ಅನುಕೂಲವಾಗುವಂತೆ "ಚಿತ್ರಾಧಾರಿತದೂರವರ್ತಿಅಳತೆಮಾಪನವ್ಯವಸ್ಥೆ" (Remote Image Based Measurement System) ಯನ್ನುಜಾರಿಗೆತರುವುದುಇಂದಿನಅಗತ್ಯತೆಯಾಗಿದೆ.	ಪರಿಶೀಲಿಸಲಾಗುತ್ತಿದೆ.
36	ಸರ್ಕಾರದಿಂದ ಕೈಗೊಳ್ಳಲಾಗುವ ಪ್ರತಿಯೋಜನೆ / ಕಾಮಗಾರಿಯು ನಿಗದಿಪಡಿಸಲಾದ ಅವಧಿಯವರೆಗೆ ಗುಣಮಟ್ಟದ ಹಾಗೂ ಸಮರ್ಪಕವಾದ ಸೇವೆಯನ್ನು ನೀಡಲು ವಿಫಲವಾದ ಸಂದರ್ಭಗಳಲ್ಲಿ ಸದರಿ ಯೋಜನೆ / ಕಾಮಗಾರಿಯ ಪುನಶ್ಚೇತನ್ಯ ಪ್ರಕ್ರಿಯೆಗಳಿಗೆ ತಗುಲಬಹುದಾದ ಆರ್ಥಿಕವೆಚ್ಚವನ್ನು ಭರಿಸಲು ಅನುಕೂಲವಾಗುವಂತೆ "ವಿಮೆವ್ಯವಸ್ಥೆ (Insurance Instrument)" ಯನ್ನು ಅಳವಡಿಸುವುದು ಇಂದಿನ ಅಗತ್ಯವಾಗಿದೆ.	ಕಾಮಗಾರಿಗಳಲ್ಲಿ "ವಿಮೆವ್ಯವಸ್ಥೆ (Insurance Instrument)" ಯನ್ನು ಅಳವಡಿಸಲಾಗಿದೆ.
37	ಕಾಮಗಾರಿಯನ್ನು ವಿವಿಧ ಹಂತಗಳಲ್ಲಿ ಗುಣಮಟ್ಟ ಖಾತರೀಕರಣಗೊಳಿಸಲು ಅನುಕೂಲವಾಗುವಂತೆ ಪ್ರತಿ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ಶೇ.2 ರಷ್ಟು ಹಣವನ್ನು ಗುಣಮಟ್ಟ ಖಾತರೀಕರಣ ಸಂಬಂಧಿತ ವೆಚ್ಚಕ್ಕಾಗಿಯೇ ಕಡ್ಡಾಯವಾಗಿ ಮೀಸಲಿಡುವುದು.	ಕಾಮಗಾರಿಗಳ ಗುಣಮಟ್ಟ ಖಾತರಿ ಸಂಬಂಧ ಯೋಜನಾ ವೆಚ್ಚದ ಅಂದಾಜಿನ ಸುಮಾರು 1% ರಿಂದ 2% ರಷ್ಟು ಮೊತ್ತವನ್ನು ಪ್ರತಿ ಕಾಮಗಾರಿಯಲ್ಲೂ ಮೀಸಲಿಡಲಾಗುತ್ತಿದೆ.
38	ನದಿ ಮರಳಿಗೆ ಪರ್ಯಾಯವಾಗಿ ಉತ್ಪಾದಿತ ಮರಳನ್ನು ಕಾಮಗಾರಿಗಳಲ್ಲಿ ಕಡ್ಡಾಯವಾಗಿ ಬಳಸಲು ಅನಿವಾರ್ಯ ನೀತಿಯನ್ನು ರೂಪಿಸಿ ಜಾರಿಗೊಳಿಸುವುದು.	ನದಿ ಮರಳಿಗೆ ಪರ್ಯಾಯವಾಗಿ ಉತ್ಪಾದಿತ ಮರಳನ್ನು ಪ್ರಮುಖ ಕಾಮಗಾರಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ.

39	ಕಾಮಗಾರಿಗಳ ಗುಣಮಟ್ಟದ ಉನ್ನತೀಕರಣ ಹಾಗೂ ವೆಚ್ಚಗಳ ಅತ್ಯುತ್ತಮೀಕರಣ ಅಂಶಗಳ ಪರಿಣಾಮಕಾರಿ ಅಳವಡಿಕೆಗೆ ಅನುಕೂಲವಾಗುವಂತೆ ಯೋಜನಾಹಂತದಿಂದ ನಿರ್ಮಾಣೋತ್ತರ ಹಂತದವರೆಗೆ ಸರ್ಕಾರದ ಕಾಮಗಾರಿಗಳನ್ನು ಏಕಕಾಲೀನ "ತಾಂತ್ರಿಕ ಪರಿಶೋಧನೆ"ಗೆ (Concurrent Technical Auditing) ಒಳಪಡಿಸಲು ಅಗತ್ಯ ಕ್ರಮಜರುಗಿಸುವುದು.	ಕ್ರಮ ವಹಿಸಬೇಕಿದೆ.
40	2015 ನೇ ಸಾಲಿನ ಅಂತ್ಯಕ್ಕೆ ನೂತನ ಡಾಂಬರು ರಸ್ತೆಗಳ ನಿರ್ಮಾಣ / ಹಾಲಿಡಾಂಬರು ರಸ್ತೆಗಳ ಅಭಿವೃದ್ಧಿಗಾಗಿ ಡಾಂಬರೀಕರಣ ಕಾಮಗಾರಿಗಳನ್ನು ಸ್ಥಗಿತಗೊಳಿಸುವುದು. (Say "NO" to Bituminous Based Road Constructions / Improvements).	ನಗರ / ಪಟ್ಟಣ / ಗ್ರಾಮಾಂತರ ಪ್ರದೇಶಗಳಲ್ಲಿನ ಡಾಂಬರು ರಸ್ತೆಗಳನ್ನು ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನಾಗಿ ಪರಿವರ್ತಿಸಲಾಗುತ್ತಿದ್ದು, ಕಾಲಕ್ರಮೇಣ ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗಳನ್ನು ಕಾಂಕ್ರಿಟೀಕರಣಗೊಳಿಸಲು ಕ್ರಮ ವಹಿಲಾಗುವುದು.

ತಾಂತ್ರಿಕಶಿಫಾರಸ್ಸುಗಳು:

41	ಮುಂದಿನ ದಿನಗಳಲ್ಲಿ ನಿರ್ಮಿಸಲಾಗುವ ಎಲ್ಲಾ ಸರ್ಕಾರಿ ಕಟ್ಟಡಗಳಲ್ಲಿ ದೀರ್ಘಬಾಳಿಕೆ, ಪರಿಸರಸ್ನೇಹಿ, ಶಕ್ತಿಸಂರಕ್ಷಣೆ (Energy Saving), ಕನಿಷ್ಠ ನಿರ್ವಹಣೆ ಹಾಗೂ ಸುಸ್ಥಿರತೆ (Sustainable) ಅಂಶಗಳನ್ನು ಅಳವಡಿಸಿ "ಹಸಿರು ಮನೆ ಪರಿಕಲ್ಪನೆ" (Green Building Concept) ಆಧಾರದನ್ವಯ ನಿರ್ಮಾಣ ಕಾಮಗಾರಿಗಳನ್ನು ಯೋಜಿಸುವುದು ಇಂದಿನ ಅಗತ್ಯವಾಗಿದೆ.	ಪ್ರಮುಖ ಕಟ್ಟಡಗಳಲ್ಲಿ ಶಕ್ತಿ ಸಂರಕ್ಷಣೆ (Energy Saving), ಕನಿಷ್ಠ ನಿರ್ವಹಣೆ ಹಾಗೂ ಸುಸ್ಥಿರತೆ (Sustainable) ಅಂಶಗಳನ್ನು ಅಳವಡಿಸಿ "ಹಸಿರು ಮನೆ ಪರಿಕಲ್ಪನೆ" (Green Building Concept) ಆಧಾರದನ್ವಯ ನಿರ್ಮಾಣ ಕಾಮಗಾರಿಗಳನ್ನು ಯೋಜಿಸುವುದನ್ನು ಅಳವಡಿಸಿಕೊಳ್ಳಲಾಗುತ್ತಿದೆ.
42	ಆಧುನಿಕ ನಿರ್ಮಾಣ ಸಾಮಗ್ರಿ / ಪದ್ಧತಿಗಳನ್ನು ಸಲುಭವಾಗಿ ಕಾಮಗಾರಿಗಳಲ್ಲಿ ಅಳವಡಿಸಿ ಕಾರ್ಯಕ್ಷಮತೆಯನ್ನು ಪರಾಮರ್ಶಿಸಲು ಅನುಕೂಲವಾಗುವಂತೆ ಅವುಗಳ ವಿಶಿಷ್ಟ ವಿವರಣೆ (Specification) ಗಳನ್ನು ಅಳವಡಿಸಿದ ಪ್ರತ್ಯೇಕವಾದ "ನೂತನ ನಿರ್ಮಾಣ ಸಾಮಗ್ರಿ/ಪದ್ಧತಿಗಳ ದರಪಟ್ಟಿ"ಯನ್ನು ಪ್ರತಿ ವರ್ಷ ಬಿಡುಗಡೆಗೊಳಿಸುವುದು ಹಾಗೂ ಕಾರ್ಯಕ್ಷಮತೆ (Performance) ಖಾತರಿಯಾದ ಕಾಮಗಾರಿ ಅಂಶಗಳನ್ನು ಆಯಾಸಾಲಿನ ಸಾಮಾನ್ಯ ದರಪಟ್ಟಿ (Regular SR) ಗಳಲ್ಲಿ ಅಳವಡಿಸಿ ಕ್ರಮಬದ್ಧಗೊಳಿಸುವುದು ಅಗತ್ಯವಾಗಿರುತ್ತದೆ.	ಕ್ರಮವಹಿಸಲಾಗುತ್ತಿದೆ.
43	ಸರ್ಕಾರದ ಕಾಮಗಾರಿಗಳ ಯೋಜನಾವರದಿ	ರೂ.10.00 ಕೋಟಿ ಮೊತ್ತಕ್ಕಿಂತ

	/ಅಂದಾಜುಪಟ್ಟಿಗಳನ್ನು ಅನುಮೋದಿಸುವ ಪ್ರಾಧಿಕಾರವು ಕಾಮಗಾರಿಗಳ ನಿರ್ದಿಷ್ಟತೆ, ಉಪಯುಕ್ತತೆ, ಸಾಮಗ್ರಿ ಹಾಗೂ ತಂತ್ರಜ್ಞಾನದ ಅಳವಡಿಕೆ, ಸೇವಾವಧಿ, ನಿರ್ವಹಣಾ/ನಿರ್ಮಾಣ ವೆಚ್ಚಗಳನ್ನು ಅತ್ಯುತ್ತಮೀಕರಣಗೊಳಿಸಿರುವ ಕುರಿತು ಖಾತರಿಪಡಿಸಿಕೊಂಡ ನಂತರ ಹಾಗೂ ವಿವರಣೆಯಲ್ಲಿರುವ ಅಂಶಗಳನ್ನು ಅಳವಡಿಸಿದ ನಂತರವೇ ಅನುಮೋದಿಸುವುದು.	ಹೆಚ್ಚಿನ ಮೊತ್ತದ ಕಾಮಗಾರಿಗಳ ಬಗ್ಗೆ ರಾಜ್ಯ ಮಟ್ಟದ ತಾಂತ್ರಿಕ ಸಲಹೆ ಮತ್ತು ಅಂದಾಜು ಪರಿಶೀಲನೆ ಸಮಿತಿಯು ಕ್ರಮ ವಹಿಸುತ್ತಿದೆ. ಸದರಿ ಸಮಿತಿಯು ಅನುಮೋದಿಸಿದ ನಂತರವೇ ಕಾಮಗಾರಿಗಳ ಅನುಮೋದನೆ ನೀಡಲು ಕ್ರಮ ವಹಿಸಲಾಗುತ್ತಿದೆ.
44	ಕಾಮಗಾರಿಗಳ ಗುಣಮಟ್ಟ, ನಿರ್ಮಾಣ ಅವಧಿ ಹಾಗೂ ವೆಚ್ಚಗಳ ಅತ್ಯುತ್ತಮೀಕರಣಗೊಳಿಸಲು ವಿವರಣೆಯಲ್ಲಿ ನಮೂದಿಸಿರುವ ನೂತನ ನಿರ್ಮಾಣ ಸಾಮಗ್ರಿಗಳ ಬಳಕೆಗೆ ಒತ್ತು ನೀಡುವುದು.	ನೂತನ ನಿರ್ಮಾಣ ಸಾಮಗ್ರಿಗಳಾದ M-Sand, Curing Compound, ಮತ್ತು Self compacting concrete ಗಳನ್ನು ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ಈಗಾಗಲೇ ಅಳವಡಿಸಕೊಳ್ಳಲಾಗಿದೆ.
45	ಸರ್ಕಾರದ ಕಾಮಗಾರಿಗಳಲ್ಲಿ ಪರಿಸರ ನಾಶಕ್ಕೆ ಕಾರಣವಾಗುವ ಮತ್ತು ವೆಚ್ಚದಾಯಕವಾಗುವ ಸುಟ್ಟ ಇಟ್ಟಿಗೆಗಳ ಬಳಕೆಯನ್ನು ಹಂತಹಂತವಾಗಿ ಸ್ಥಗಿತಗೊಳಿಸಿ ಪರ್ಯಾಯ ಸಾಮಗ್ರಿಗಳ ಬಳಕೆಗೆ ಒತ್ತು ನೀಡುವುದು.	CC Blocks, soil cement blocks, Fly Ash Bricks, Monolithic Constructions, Precast walls ಗಳನ್ನು ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ಈಗಾಗಲೇ ಅಳವಡಿಸಕೊಳ್ಳಲಾಗಿದೆ.
46	ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳ ವ್ಯಾಪ್ತಿಯಲ್ಲಿ ಭೂಮಿಯ ಕೆಳಭಾಗದಲ್ಲಿ ಹಾಗೂ ಮೇಲ್ಭಾಗದಲ್ಲಿ ಅಳವಡಿಸಲಾಗಿರುವ ನೀರು ಸರಬರಾಜು / ಒಳಚರಂಡಿ / ಅನಿಲಸರಬರಾಜು / ದೂರಸಂಪರ್ಕ / ವಿದ್ಯುಚ್ಛಕ್ತಿ ಸರಬರಾಜು ಹಾಗೂ ಇತರೆ ಸಾರ್ವಜನಿಕ ಸೇವಾ ಸಂಪರ್ಕನೆಲೆಗಳ (Public Utility Service Lines) ಸಂಪೂರ್ಣ ವಿವರಗಳನ್ನು ಆಧುನಿಕ ತಂತ್ರಜ್ಞಾನದ ನೆರವಿನಿಂದ ಸಮೀಕ್ಷೆ ನಡೆಸಿ ತಂತ್ರಾಂಶ ರೂಪದಲ್ಲಿ ಕ್ರೋಢೀಕರಿಸಿ ದಾಖಲೀಕರಣಗೊಳಿಸುವುದು ಅತ್ಯಗತ್ಯವಾಗಿರುತ್ತದೆ. ಮುಂದಿನ ದಿನಗಳಲ್ಲಿ ಪ್ರಸ್ತಾಪಿಸಲಾಗುವ ವಿವಿಧ ನಿರ್ಮಾಣ/ನವೀಕರಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಯೋಜಿಸಲು ಸದರಿ ಮಾಹಿತಿಯು ಸಹಾಯಕವಾಗುವುದಲ್ಲದೇ ಅನಗತ್ಯ ವಿಳಂಬ ಹಾಗೂ ಅನಪೇಕ್ಷಿತ ವೆಚ್ಚಗಳನ್ನು ನಿಯಂತ್ರಿಸಲು ಸಾಧ್ಯವಾಗುವುದರಿಂದ ಈ ಬಗ್ಗೆ ಅಗತ್ಯ ಕ್ರಮ ಜರುಗಿಸುವ ಅವಶ್ಯವಿರುತ್ತದೆ.	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿರುತ್ತದೆ.

47	ನಿರ್ಮಾಣ ಸಾಮಗ್ರಿಗಳ ದರ ನಿಗದಿಪಡಿಸಲು ಸದರಿ ಸಾಮಗ್ರಿಗಳ ಉತ್ಪಾದನೆಗೆ ವ್ಯಯವಾಗುವ ಶಕ್ತಿಯ ಮೌಲ್ಯಮಾಪನದ ಆಧಾರದ ಮೇಲೆ ಲೆಕ್ಕಾಚಾರ ಮಾಡುವುದರಿಂದ ವಾಸ್ತವದರಗಳು ಬಿಂಬಿತವಾಗುವುದರಿಂದ ಈ ಬಗ್ಗೆ ಅಗತ್ಯ ಕ್ರಮಜರುಗಿಸುವುದು.	ದರಪಟ್ಟಿಯ ತಯಾರಿಕೆಯಲ್ಲಿ ನಿರ್ಮಾಣ ಸಾಮಗ್ರಿಗಳ ದರಗಳನ್ನು ಮಾರುಕಟ್ಟೆ ದರಗಳಂತೆ ಅಳವಡಿಸಲಾಗುತ್ತಿದೆ.
48	ಗುತ್ತಿಗೆದಾರರು ಹಾಗೂ ನಿರ್ಮಾಣ ಕಾರ್ಮಿಕರು ಪ್ರಮಾಣೀಕೃತ ತರಬೇತಿ ಕಾರ್ಯಕ್ರಮಗಳಲ್ಲಿ ಕಡ್ಡಾಯ ಭಾಗವಹಿಸುವಿಕೆಯನ್ನು ಪೂರ್ವಾರ್ಹತೆ ಎಂದು ಗುತ್ತಿಗೆ ವಹಿಸುವ ಪ್ರಕ್ರಿಯೆಗಳಲ್ಲಿ ಪರಿಗಣಿಸುವುದು.	ಪ್ರಸ್ತುತ Standard bid document ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದು, ಇದರಲ್ಲಿ ಪೂರ್ವಾಹತೆ ನಿಗಧಿಪಡಿಸಲು ಇರುವ ಮಾನದಂಡವನ್ನು ಅಳವಡಿಸಿಕೊಳ್ಳಲಾಗಿದೆ.
49	ಗುತ್ತಿಗೆ ಕರಾರು ಪತ್ರದಲ್ಲಿ ಕಳಪೆ ಕಾಮಗಾರಿಗಳ ನಿರ್ಮಾಣಕ್ಕೆ ಕಾರಣವಾಗುವ ಗುತ್ತಿಗೆದಾರ/ ಸಮಾಲೋಚಕರುಗಳ ವಿರುದ್ಧ ಶಿಸ್ತು ಕ್ರಮ ಹಾಗೂ ದಂಡವಿಧಿಸುವುದು ಮತ್ತು ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆದಾರ/ಸಮಾಲೋಚಕರಿಗೆ ಪ್ರೋತ್ಸಾಹದ ಬಹುಮಾನ ನೀಡುವ ಅಂಶಗಳನ್ನು ಅಳವಡಿಸಿ ತಿದ್ದು ಪಡಿಗೊಳಿಸುವುದು.	ಗುತ್ತಿಗೆ ಕರಾರು ಪತ್ರದಲ್ಲಿ ಕಳಪೆ ಕಾಮಗಾರಿಗಳ ನಿರ್ಮಾಣಕ್ಕೆ ಕಾರಣವಾಗುವಗುತ್ತಿಗೆದಾರ/ ಸಮಾಲೋಚಕರುಗಳ ವಿರುದ್ಧ ಶಿಸ್ತು ಕ್ರಮ ಹಾಗೂ ದಂಡವಿಧಿಸುವ ಬಗ್ಗೆ ಈಗಾಗಲೇ ಅಳವಡಿಸಿಕೊಳ್ಳಲಾಗಿದೆ. ಉತ್ತಮವಾದ ಕಾಮಗಾರಿಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಿದಲ್ಲಿ ಗುತ್ತಿಗೆದಾರರಿಗೆ ಪ್ರೋತ್ಸಾಹಕ ಬಹುಮಾನ ನೀಡುವ ಬಗ್ಗೆ ಪರಿಶೀಲಿಸಲಾಗುವುದು.
50	ನೂತನ ರಸ್ತೆಗಳ ನಿರ್ಮಾಣಕ್ಕಾಗಿ ಹಾಗೂ ಹಾಲಿ ರಸ್ತೆಗಳ ಅಭಿವೃದ್ಧಿಗಾಗಿ ಕಾಂಕ್ರೀಟಿಂಗ್/ವೈಟ್ಟಾಪಿಂಗ್/ಅಂತರ್ಜೋಡಿತ ಕಾಂಕ್ರೀಟ್ಪೇವರ್ಬ್ಲಾಕ್‌ಗಳನ್ನು (Interlocking Concrete Paver Blocks - ICPB) ಡಾಂಬರೀಕರಣ ಪ್ರಸ್ತಾವನೆಗಳಿಗೆ ಪರ್ಯಾಯವಾಗಿ ಅಳವಡಿಸುವುದು.	ಡಾಂಬರೀಕರಿಸಿದ ರಸ್ತೆಗಳಿಗೆ ಪರ್ಯಾಯವಾಗಿ ವೈಟ್ಟಾಪಿಂಗ್ಮಾಡುವುದು ಹಾಗೂ ಅಂತರ್ಜೋಡಿತ ಕಾಂಕ್ರೀಟ್ಪೇವ ಬ್ಲಾಕ್‌ಗಳನ್ನು(Interlocking Concrete Paver Blocks - ICPB) ಅಳವಡಿಸಲು ಹಲವು ಇಲಾಖೆ / ಸಂಸ್ಥೆಗಳಲ್ಲಿ ಈಗಾಗಲೇ ಕ್ರಮವಹಿಸಲಾಗಿದೆ.
51	ಮಹಾನಗರಪಾಲಿಕೆ/ನಗರಪಾಲಿಕೆ/ನಗರಸಭೆಗಳ ವ್ಯಾಪ್ತಿಯಲ್ಲಿ ಡಾಂಬರು ರಸ್ತೆಗಳನ್ನು ಅಭಿವೃದ್ಧಿಪಡಿಸುವ ಮುನ್ನ ಹಾಲಿ ರಸ್ತೆಗಳಲ್ಲಿ ಅನಗತ್ಯವಾಗುವ ಡಾಂಬರು ಪದರಗಳನ್ನು ಮಿಲ್ಲಿಂಗ್ಮೂಲಕ ತೆರವುಗೊಳಿಸಿ ಲಭ್ಯವಾಗುವ ಸಾಮಗ್ರಿಯನ್ನು	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.

	ಮರುಬಳಕೆ ಮಾಡಲು ಸೂಕ್ತ ಕ್ರಮಜರುಗಿಸುವುದು.	
52	ನಗರ/ಪಟ್ಟಣ/ಹಳ್ಳಿಪರಿಮಿತಿಗಳಲ್ಲಿ ಹಾಯ್ದು ಹೋಗುವ ರಾಷ್ಟ್ರೀಯಹೆದ್ದಾರಿ/ರಾಜ್ಯಹೆದ್ದಾರಿ/ ಜಿಲ್ಲಾ ಮುಖ್ಯರಸ್ತೆಯ ಭಾಗಗಳ ಇಕ್ಕೆಲಗಳಲ್ಲಿ ಶಾಶ್ವತ ತಡೆಗಟ್ಟು/ಕೈಹಿಡಿ (Handrails) ಗಳಅಳವಡಿಕೆ	ನಗರ / ಪಟ್ಟಣಗಳ ಪರಿಮಿತಿಯಲ್ಲಿ ಹಾದು ಹೋಗುವ ರಾಜ್ಯಹೆದ್ದಾರಿ / ಜಿಲ್ಲಾ ಮುಖ್ಯರಸ್ತೆಗಳ ಭಾಗದಲ್ಲಿ Handrailsನ್ನು ರಸ್ತೆ ಸುರಕ್ಷತಾ ದೃಷ್ಟಿಯಿಂದ ಅಳವಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.
53	ರಾಜ್ಯದ ನಗರ/ಪಟ್ಟಣ/ಮಹಾನಗರಗಳ ವ್ಯಾಪ್ತಿಯ ರಸ್ತೆಗಳಲ್ಲಿ ಸಾರ್ವಜನಿಕರು ಸುರಕ್ಷಿತವಾಗಿ ಹಾಗೂ ಸುಗಮವಾಗಿ ಕಾಲ್ನಡಿಗೆಯಿಂದ (Walk mode) ಸಂಚರಿಸಲು ಅಗತ್ಯವಿರುವ ಪಾದಚಾರಿ ಮಾರ್ಗಗಳನ್ನು ಪ್ರಾಧಾನ್ಯತೆಯೊಂದಿಗೆ ಕಡ್ಡಾಯವಾಗಿ ನಿರ್ಮಿಸುವುದು ಹಾಗೂ ಪ್ರಸ್ತುತ ನಿರ್ಮಿಸಲಾಗಿರುವ ಪಾದಾಚಾರಿ ಮಾರ್ಗಗಳು ಒತ್ತುವರಿಯಾಗದಂತೆ ಕಟ್ಟು ನಿಟ್ಟಿನ ಕ್ರಮ ಜರುಗಿಸುವ ಅಗತ್ಯ ಇರುತ್ತದೆ.	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.
54	ಕೆರೆ ಏರಿಗಳ ಮೇಲೆ ಹಾಯ್ದುಹೋಗುವ ಎಲ್ಲಾ ವರ್ಗದ ರಸ್ತೆಗಳನ್ನು ಭೂಸ್ವಾಧೀನ ಸಮಸ್ಯೆ ಇಲ್ಲದೇ ವಿಭಜಕಸಹಿತಕ ನಿಷ್ಪದ್ವಿ ಪಥ ಅಗಲದ ರಸ್ತೆಗಳಾಗಿ ವಿಸ್ತರಿಸುವುದು.	ರಸ್ತೆ ಸುರಕ್ಷತಾ ದೃಷ್ಟಿಯಿಂದ ಕೆರೆ ಏರಿಗಳ ಮೇಲೆ ಹಾಯ್ದು ಹೋಗುವ ರಸ್ತೆಗಳನ್ನು ಮಧ್ಯಂತರ / ದ್ವಿಪಥ ರಸ್ತೆಗಳನ್ನಾಗಿ ಅಗಲೀಕರಣ ಕಾಮಗಾರಿಯನ್ನು ಈಗಾಗಲೇ ಕೈಗೊಳ್ಳಲಾಗುತ್ತಿದೆ. ಹಾಗೂ ನಾಲೆಗಳ ಬದಿಯಲ್ಲಿ ರಸ್ತೆ ಸುರಕ್ಷತೆ ಕಾಮಗಾರಿಗಳು ಮತ್ತು ಬ್ಯಾರಿಕೇಡಿಂಗ್ ನಿರ್ಮಾಣಕ್ಕಾಗಿ ಪ್ರತ್ಯೇಕ ಲೆಕ್ಕ ಶೀರ್ಷಿಕೆಯನ್ನು ಸೃಜಿಸಿದ್ದು, ಸುರಕ್ಷತೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.
55	ರಾಜ್ಯದಲ್ಲಿರುವ ಪ್ರಮುಖ ರಸ್ತೆಗಳಲ್ಲಿ ನೂತನವಾಗಿ ನಿರ್ಮಿಸಲಾಗುವ ಹಾಗೂ ಹಾಲಿ ಸೇತುವೆಗಳನ್ನು ಪುನಃಶ್ಚೇತನಗೊಳಿಸುವ ಸಂದರ್ಭಗಳಲ್ಲಿ ಅಗತ್ಯವಿರುವಲ್ಲಿ Bridge cum Barrage ಗಳಾಗಿ ಸೂಕ್ತವಾಗಿ ವಿನ್ಯಾಸಿ ಸಿನಿರ್ಮಿಸುವುದು.	ಪರಿಶೀಲಿಸಲಾಗುತ್ತಿದೆ.
56	ಬೆಂಗಳೂರು ನಗರದಲ್ಲಿ ಪಾದಚಾರಿಗಳ ಹಾಗೂ ವಾಹನಗಳ ದಿನ ನಿತ್ಯದ ಸಂಚಾರಕ್ಕೆ ಅಡಚಣೆಯಾಗದಂತೆ ಪೂರ್ವಭಾವಿ ವ್ಯವಸ್ಥೆಗಳನ್ನು ಸಮರ್ಪಕವಾಗಿ ಅಣಿಗೊಳಿಸಿದ ನಂತರವೇ	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.

	ಮೆಟ್ರೋ ಯೋಜನೆಯ ಕಾಮಗಾರಿಗಳನ್ನು ಸ್ಥಳ ನಿರ್ದಿಷ್ಟತೆಗೆ ತಕ್ಕಂತೆ ಅತ್ಯುತ್ತಮೀಕರಣ (Optimization) ದೊಂದಿಗೆ ವಿನ್ಯಾಸಿಸಿ ಕಾರ್ಯರೂಪಕ್ಕೆ ತರುವ ಬಗ್ಗೆ ಅಗತ್ಯ ಕ್ರಮವಹಿಸುವುದು	
57	ಸರ್ಕಾರಿ ಕಟ್ಟಡ ನಿರ್ಮಾಣದಲ್ಲಿ ದೀರ್ಘಬಾಳಿಕೆ ಹಾಗೂ ಕನಿಷ್ಠ ನಿರ್ವಹಣೆ ಬೇಡುವ Monolithic Construction ತಂತ್ರಜ್ಞಾನವನ್ನು ಕಡ್ಡಾಯವಾಗಿ ಅಳವಡಿಸುವುದು	ಸರ್ಕಾರಿ ಕಟ್ಟಡ ನಿರ್ಮಾಣದಲ್ಲಿ Monolithic Construction ತಂತ್ರಜ್ಞಾನವನ್ನು ಈಗಾಗಲೇ ಅಳವಡಿಸಿಕೊಳ್ಳಲಾಗುತ್ತಿದೆ.
58	ಕನಿಷ್ಠ ನಿರ್ವಹಣೆಗೆ ಪೂರಕವಾಗಿರುವ ಕಟ್ಟಡ ನಿರ್ಮಾಣ ಸಾಮಗ್ರಿಗಳು ಹಾಗೂ ನಿರ್ಮಾಣ ಪದ್ಧತಿಗಳ ಅಳವಡಿಕೆಗೆ ಒತ್ತು ನೀಡುವುದು.	ಕನಿಷ್ಠ ನಿರ್ವಹಣೆಗೆ ಪೂರಕವಾಗಿರುವ ಕಟ್ಟಡ ನಿರ್ಮಾಣ ಸಾಮಗ್ರಿಗಳು ಹಾಗೂ ನಿರ್ಮಾಣ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಕ್ರಮ ವಹಿಸಲಾಗಿದೆ.
59	RCC ನಿರ್ಮಾಣಗಳಲ್ಲಿ ಹುದುಗಿಸಿರುವ ಉಕ್ಕಿನ ಸರಳುಗಳ ಸ್ಥಾನವು ನಿರ್ಮಿತ ಕಟ್ಟಡದ ಸಾಮರ್ಥ್ಯ ಹಾಗೂ ಬಾಳಿಕೆಯನ್ನು ನಿರ್ಧರಿಸಿರುವುದರಿಂದ ಆರ್‌ಸಿಸಿ ಪ್ರಕ್ರಿಯೆಗಳಲ್ಲಿ ಉಕ್ಕಿನ ಸರಳುಗಳನ್ನು ಸಂಸ್ಥಾನೀಕರಿಸಲು ಕವರ್‌ಬ್ಲಾಕ್ (Cover Block) ಗಳನ್ನು ಕಡ್ಡಾಯವಾಗಿ ಬಳಕೆ ಮಾಡುವ ಅಗತ್ಯವಿರುತ್ತದೆ.	ಇಲಾಖೆಯ ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ಆರ್‌ಸಿಸಿ ನಿರ್ಮಾಣಗಳಲ್ಲಿ ಕವರ್‌ಬ್ಲಾಕ್ (Cover Block) ಗಳನ್ನು ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.
60	ಸರ್ಕಾರದಿಂದ ನಿರ್ಮಿಸಲಾಗುವ ಪ್ರತಿ ಕಟ್ಟಡಕ್ಕೆ ಪರಿಸರ ಸ್ನೇಹಿ ಹಾಗೂ ಕನಿಷ್ಠ ನಿರ್ವಹಣೆ ಬೇಡುವ ಸ್ವತಂತ್ರ Soil Biotechnology (SBT) ಆಧಾರಿತ ಕಿರು ತ್ಯಾಜ್ಯ ಶುದ್ಧೀಕರಣ ಘಟಕವನ್ನು ಅಳವಡಿಸುವುದು.	ಸರ್ಕಾರದಿಂದ ನಿರ್ಮಿಸಲಾಗುವ ಕಟ್ಟಡಗಳಲ್ಲಿ ಕಿರುತ್ಯಾಜ್ಯ ಶುದ್ಧೀಕರಣ ಘಟಕವನ್ನು ಅಳವಡಿಸಿಕೊಂಡು ಶುದ್ಧೀಕರಿಸಿದ ನೀರನ್ನು ತೋಟಗಾರಿಕೆ ಹಾಗೂ Toilets flushing ಗೆ ಉಪಯೋಗಿಸಿಕೊಳ್ಳಲು ಈಗಾಗಲೇ ಕ್ರಮ ವಹಿಸಲಾಗುತ್ತಿದೆ.
61	ಕಟ್ಟಡಗಳ ಆವರಣದಲ್ಲಿ ನೆಲ ಹಾಸಿಗಾಗಿ ಅಂತರ್ಜೋಡಿತ ಕಾಂಕ್ರೀಟ್ಪೇವರ್‌ಬ್ಲಾಕ್ (ICPB) ಗಳನ್ನುಬಳಕೆಮಾಡುವುದು.	ಕಟ್ಟಡಗಳ ಆವರಣದಲ್ಲಿ ನೆಲಹಾಸಿಗಾಗಿ ಅಂತರ್ಜೋಡಿತ ಕಾಂಕ್ರೀಟ್ಪೇವರ್‌ಬ್ಲಾಕ್ (ICPB) ಗಳನ್ನುಅಳವಡಿಸಿಕೊಳ್ಳಲಾಗಿದೆ.
62	ಕಟ್ಟಡದಲ್ಲಿ ಬೆಂಕಿ ಸುರಕ್ಷತಾ ವ್ಯವಸ್ಥೆಗಳ ಅಳವಡಿಕೆ ಸಂದರ್ಭದಲ್ಲಿ ಹೊಗೆಯನ್ನು ಕ್ಷಿಪ್ರವಾಗಿ ತೆರವುಗೊಳಿಸಲು ಸಮರ್ಪಕವಾದ ಸ್ವಯಂಚಾಲಿತ ಸಾಧನಗಳನ್ನು ಅಳವಡಿಸಲು ಪ್ರಾಧಾನ್ಯತೆ ನೀಡುವುದು.	ಪ್ರಮುಖ ಕಟ್ಟಡಗಳಲ್ಲಿ ಬೆಂಕಿ ಸುರಕ್ಷತಾ ವ್ಯವಸ್ಥೆಗಳನ್ನು ಪೂರ್ಣಪ್ರಮಾಣದಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ.
63	ರಾಷ್ಟ್ರೀಯ ಕಟ್ಟಡಗಳ ನಿಯಮ (NBC) ಗಳ ಪೂರಕವಾಗಿರದ ಸರ್ಕಾರಿ ಕಟ್ಟಡಗಳನ್ನು 2013ರಅಂತ್ಯದೊಳಗೆ	ಹಂತಹಂತವಾಗಿ ಕ್ರಮ ಜರುಗಿಸಲಾಗುತ್ತಿದೆ.

	ಗುರುತಿಸಿಪರಿಷ್ಕರಿಸುವುದು.	
64	ಸರ್ಕಾರಿ ಪರಿವೀಕ್ಷಣಾ ಮಂದಿರಗಳಲ್ಲಿ ವಿವಿಧ ಕೋಣೆ / ಉಪಕೋಣೆಗಳ ಪ್ರಮಾಣ (Dimension) ವನ್ನು ಅಗತ್ಯಕ್ಕನುಗುಣವಾಗಿ ವಿನ್ಯಾಸಿಸಿ ನಿರ್ಮಿಸುವುದು.	ಪ್ರಸ್ತುತ ಅಗತ್ಯಕ್ಕನುಗುಣವಾಗಿ ಪರಿವೀಕ್ಷಣಾ ಮಂದಿಗಳಲ್ಲಿಕೋಣೆ / ಉಪ ಕೋಣೆಗಳ ಗಾತ್ರವನ್ನು ನಿಗದಿಮಾಡಲಾಗುತ್ತಿದೆ.
65	ವಾಸ್ತು ಶಿಲ್ಪನಕ್ಷೆಗಳ ಗುಣಮಟ್ಟದ ವಿನ್ಯಾಸಕ್ಕೆ ವಿವರಣೆಯಲ್ಲಿ ಸೂಚಿಸಲಾದ ಕ್ರಮಗಳನ್ನು ಕಡ್ಡಾಯವಾಗಿ ಅಳವಡಿಸುವುದು.	ವಾಸ್ತು ಶಿಲ್ಪನಕ್ಷೆಗಳನ್ನು ತಯಾರಿಸುವಾಗ ಎಲ್ಲಾ ಅಂಶಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ.
66	ಕಾಲುವೆ ಜಾಲಗಳಲ್ಲಿರುವ ಸುರಂಗಮಾರ್ಗಗಳನ್ನು ಸಮರ್ಥವಾಗಿ ಹಾಗೂ ನಿಯಮಿತವಾಗಿ ನಿರ್ವಹಣೆಗೊಳಪಡಿಸಲು ಅನುಕೂಲವಾಗುವಂತೆ ಪ್ರತ್ಯೇಕವಾದ "ಸುರಂಗ ನಿರ್ವಹಣಾ ವಿಭಾಗ"ವನ್ನು ರಚಿಸುವುದು ಅತ್ಯಗತ್ಯವಾಗಿದೆ.	ನೀರಾವರಿ ಇಲಾಖೆ ಸಂಬಂಧಿಸಿದೆ.
67	ಭೂಸ್ವಾಧೀನ ಹಾಗೂ ಮುಳುಗಡೆ ಬಾಧೆ ಇಲ್ಲದೆ ನೀರು ಸಂಗ್ರಹಣೆಗೆ ಪೂರಕವಾಗಿರುವ ಕಿರುಅಣೆಕಟ್ಟು (Barrages) ಗಳ ನಿರ್ಮಾಣಕ್ಕೆ ಒತ್ತು ನೀಡುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
68	ರಾಜ್ಯದ ಜಲಾಶಯಗಳಿಂದ ನೀರಾವರಿಗೊಳಪಡುವ ಅಚ್ಚುಕಟ್ಟು ಪ್ರದೇಶ (Command Area) ಗಳ ವ್ಯಾಪ್ತಿಯಲ್ಲಿ ಬರುವ ಹಾಗೂ ಸಾಮೀಪ್ಯದಲ್ಲಿರುವ ಎಲ್ಲಾ ಕೆರೆಗಳನ್ನು ಪ್ರಾಧಾನ್ಯತೆಯೊಂದಿಗೆ ಮರುಪೂರಣ (Replenishment) ಗೊಳಿಸುವ ಯೋಜನೆಗಳನ್ನು ಹಮ್ಮಿಕೊಳ್ಳುವುದು ಅತ್ಯಗತ್ಯವಾಗಿರುತ್ತದೆ.	ನೀರಾವರಿ ಇಲಾಖೆ ಸಂಬಂಧಿಸಿದೆ.
69	ಮಳೆ ನೀರಿನ ಮೇಲ್ಮೈಹರಿವು (Runoff Study) ಮಾಹಿತಿಯನ್ನು ಯಥಾಕಾಲಿಕವಾಗಿ ಸಂಗ್ರಹಿಸಲು ಅಗತ್ಯ ಕ್ರಮ ಜರುಗಿಸುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
70	ದ್ರವೀಯ ಲಕ್ಷಣಗಳ (Hydraulic Charecters) ಅಧ್ಯಯನದ ಆಧಾರದ ಮೇಲೆ ವಿನ್ಯಾಸಿಸಿ ನಿರ್ಮಿಸಲಾದ ಕಾಲುವೆಗಳ ಜಾಲ ಹಾಗೂ ಅಡ್ಡಚರಂಡಿ ಕಾಮಗಾರಿಗಳನ್ನು (CD Works) ನಿರ್ಮಾಣದ ನಂತರ ಉದ್ದೇಶಿತ ನೀರು ಹರಿವಿನ ಸಾಮರ್ಥ್ಯವನ್ನು ಹೊಂದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
71	ಕಾಲುವೆ ಜಾಲಗಳ ಕಾರ್ಯಕ್ಷಮತೆಯನ್ನು ವೃದ್ಧಿಸಲು ನೀರಿನ ಹರಿವು ನಿಯಂತ್ರಕ (Regulators) ಗಳನ್ನು ಸ್ವಯಂಚಾಲನಾ (Automation) ವ್ಯವಸ್ಥೆಗೆ ಒಳಪಡಿಸುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
72	ಕಾಲುವೆ ಜಾಲಗಳ ದಕ್ಷತೆಯನ್ನು ಹೆಚ್ಚಿಸಲು ಅನುಕೂಲವಾಗುವಂತೆ ವಾರ್ಷಿಕವಾಗಿ Head Loss Audit ಗೆ ಒಳಪಡಿಸಿ ಜಲಶಕ್ತಿಯ ನಷ್ಟವನ್ನು ತಡೆಯಲು ಅಗತ್ಯ ಕ್ರಮಗಳನ್ನು ಜರುಗಿಸುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.

73	ನೀರನ್ನು ಪರಿಣಾಮಕಾರಿಯಾಗಿ ಬಳಸಲು ಹಾಗೂ ಕೃಷಿ ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಳ್ಳಲು ಅಚ್ಚುಕಟ್ಟು ವ್ಯಾಪ್ತಿಯಲ್ಲಿರುವ ಕೃಷಿಕರಿಗೆ ತಾಂತ್ರಿಕ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
74	ಕಾಲುವೆಗಳ ಸೇವಾರಸ್ತೆ (Service Road) ಗಳ ಸಾಮೀಪ್ಯದಲ್ಲಿ ಬೆಳವಣಿಗೆಯಾಗಲಿರುವ ಜನ ವಸತಿ ಪ್ರದೇಶಗಳ ಬಗ್ಗೆ ಪೂರ್ವಾಲೋಚಿಸಿ ಸದರಿ ಭಾಗದ ಕಾಲುವೆ ಹಾಗೂ ರಸ್ತೆಗಳನ್ನು ಸದೃಢವಾಗಿ ನಿರ್ಮಿಸುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
75	ಕಾಲುವೆ ಜಾಲಗಳಲ್ಲಿರುವ ಅಡ್ಡಚರಂಡಿ ಕಾಮಗಾರಿಗಳನ್ನು (CD Works) ನೀರು ಸೋರಿಕೆಯಾಗದಂತೆ ಸೂಕ್ತವಾಗಿ ವಿನ್ಯಾಸಿಸಿ ನಿರ್ಮಿಸುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
76	ಸಾಂಪ್ರದಾಯಿಕವಾಗಿ ನಿರ್ಮಿಸಲಾಗುತ್ತಿರುವ (Rising main) ಕೊಳವೆ ವ್ಯವಸ್ಥೆಗೆ ಪರ್ಯಾಯವಾಗಿ ನೂತನ ತಂತ್ರಜ್ಞಾನ (Micro Tunnelling) ಅಳವಡಿಸಲಾದ ಸುರಂಗ ಮಾರ್ಗ ನಿರ್ಮಾಣಕ್ಕೆ ಒತ್ತು ನೀಡುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
77	ಕ್ಷಿಪ್ರ ನಿರ್ಮಾಣ ವೇಗ ಹಾಗೂ ನಿಗದಿತ ಗುಣಮಟ್ಟ ಹೊಂದಿರುವ ಪೂರ್ವ ನಿರ್ಮಿತ ಸಿಮೆಂಟ್ ಕಾಂಕ್ರೀಟ್ ಉತ್ಪನ್ನಗಳನ್ನು ನಿರ್ಮಾಣ ಕಾಮಗಾರಿಗಳಲ್ಲಿ ಬಳಸುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
78	ನಾಲೆಗಳನ್ನು ನಿಯಮಿತವಾದ ನಿರ್ವಹಣೆಗೆ ಒಳಪಡಿಸುವುದರಿಂದ ಕಾಲುವೆಜಾಲದ ಕಾರ್ಯಕ್ಷಮತೆ ವೃದ್ಧಿಯಾಗಲಿದ್ದು, ಈ ನಿಟ್ಟಿನಲ್ಲಿ ಕಡ್ಡಾಯವಾಗಿ ಅಗತ್ಯ ಕ್ರಮಗಳನ್ನು ಜರುಗಿಸುವುದು.	ನೀರಾವರಿ ಇಲಾಖೆ ಸಂಬಂಧಿಸಿದೆ.
79	ನೀರು ಸರಬರಾಜು ವ್ಯವಸ್ಥೆಯಲ್ಲಿ ಜಲಶಕ್ತಿಯ ವ್ಯಯವು ನಿಗದಿತ ನಷ್ಟವನ್ನು ಮೀರದಂತೆ ನಿಯಂತ್ರಣದಲ್ಲಿರುವ ನೀರು ಸರಬರಾಜು ಜಾಲವನ್ನು Head Loss Audit ಗೆ ಅಳವಡಿಸುವುದು.	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.
80	ರಾಜ್ಯದಲ್ಲಿನ ನಗರ ಪಾಲಿಕೆ, ಬೃಹತ್ ನಗರ ಪಾಲಿಕೆ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ನೀರು ಸರಬರಾಜು ವ್ಯವಸ್ಥೆಯಲ್ಲಿ ಶಕ್ತಿಯ ವ್ಯಯ (Energy Loss) ವನ್ನು ತಹಬಂದಿಯಲ್ಲಿಡುವುದರೊಂದಿಗೆ ನೀರು ವಿತರಣಾ ಪ್ರಕ್ರಿಯೆಯ ಕಾರ್ಯಕ್ಷಮತೆಯನ್ನು ವೃದ್ಧಿಗೊಳಿಸಲು ನೀರು ಸರಬರಾಜು ವ್ಯವಸ್ಥೆಯನ್ನು ಸಮಗ್ರವಾಗಿ Automation ಗೊಳಿಸುವ ಅಗತ್ಯವಿರುವುದರಿಂದ, ಈ ಬಗ್ಗೆ ಸೂಕ್ತ ಕ್ರಮಗಳನ್ನು ಜರುಗಿಸಲು ಕಾರ್ಯೋನ್ಮುಖವಾಗಬೇಕಿದೆ.	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.
81	ನಗರಸಭೆ/ಮಹಾನಗರಪಾಲಿಕೆ/ಬೃಹತ್ನಗರಪಾಲಿಕೆಗಳ ವ್ಯಾಪ್ತಿಯ ಮಳೆನೀರು ಚರಂಡಿಗಳಲ್ಲಿ ಹರಿಯುತ್ತಿರುವ ಕಲುಷಿತ ನೀರಿನ ಶುದ್ಧೀಕರಣಕ್ಕಾಗಿ ಕನಿಷ್ಠ ನಿರ್ವಹಣೆ ಬೇಡುವ ಹಾಗೂ	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.

	ಅಧಿಕ ಕಾರ್ಯಕ್ಷಮತೆ ಹೊಂದಿರುವ Soil Biotechnology ತಂತ್ರಜ್ಞಾನ ಆಧಾರಿತ ವಿಕೇಂದ್ರಿತ ಕಿರುಶುದ್ಧೀಕರಣ ಘಟಕಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.	
82	ಒಳಚರಂಡಿ ಜಾಲಗಳಲ್ಲಿ ಸಾಂಪ್ರದಾಯಿಕವಾಗಿ ನಿರ್ಮಿಸಲಾಗುತ್ತಿರುವ ಮ್ಯಾನ್ಹೋಲ್‌ಗಳಿಂದ ವಾಹನ ಸಂಚಾರಕ್ಕೆ ತೊಡಕಾಗುತ್ತಿರುವುದರಿಂದ ಮತ್ತು ಪ್ರಸ್ತುತ ಪರಿಸ್ಥಿತಿಗಳಲ್ಲಿ ಅವುಗಳ ಉಪಯುಕ್ತತೆಯು ಅಸಮರ್ಪಕವಾಗಿರುವುದರಿಂದ ಅವುಗಳಿಗೆ ಪರ್ಯಾಯವಾಗಿರುವ ಪೈಪ್‌ಹೋಲ್ (Pipe Hole) ಗಳನ್ನು ಲಭ್ಯವಿರುವ ತಂತ್ರಜ್ಞಾನದ ಬಳಕೆಯೊಂದಿಗೆ ವಿನ್ಯಾಸಿಸಿ ಅಳವಡಿಸಲು ಕ್ರಮವಹಿಸುವುದು ಅಗತ್ಯವಾಗಿರುತ್ತದೆ.	ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದೆ.
83	ನಾಶಪಡಿಸಲಾದ ಕಟ್ಟಡಗಳಿಂದ ಲಭ್ಯವಾಗುವ ಸಾಮಗ್ರಿಗಳನ್ನು ತ್ಯಾಜ್ಯವೆಂದು ಪರಿಗಣಿಸದೇ ಕಾರ್ಯಸಾಧು ವಿಧಾನಗಳ ಮೂಲಕ ಸೂಕ್ತವಾಗಿ ಸಂಸ್ಕರಿಸಿ ನಿರ್ಮಾಣ ಕಾಮಗಾರಿಗಳಲ್ಲಿ ಮರುಬಳಕೆ ಮಾಡುವುದರಿಂದ ತ್ಯಾಜ್ಯ ವಿಲೇವಾರಿ ಸಮಸ್ಯೆಯ ಪರಿಹಾರದ ಜೊತೆಗೆ ನೈಸರ್ಗಿಕ ಸಾಮಗ್ರಿಗಳ ಬಳಕೆಯನ್ನು ತಕ್ಕ ಮಟ್ಟಿಗೆ ನಿಯಂತ್ರಿಸ ಬಹುದಾಗಿದ್ದು, ಈ ಬಗ್ಗೆ ಕ್ರಮವಹಿಸುವ ಅಗತ್ಯವಿರುತ್ತದೆ.	ಈ ಬಗ್ಗೆ Karnataka Public Works Departmental Code-2014ರಲ್ಲಿ Environmental Impact Assessment and Management ಅಧ್ಯಾಯವನ್ನು ಸೇರ್ಪಡೆ ಮಾಡಲಾಗಿದೆ. ತ್ಯಾಜ್ಯವನ್ನು ಸಂಸ್ಕರಿಸಿ ಮರು ಬಳಕೆ ಮಾಡುವ ಬಗ್ಗೆ ಕ್ರಮ ವಹಿಸಬೇಕಿದೆ.

ಸಹಿ/-

ಪ್ರಧಾನಇಂಜಿನಿಯರ್,
ಯೋಜನೆಮತ್ತುರಸ್ತೆಗಳಆಸ್ತಿನಿರ್ವಹಣಾಕೇಂದ್ರ
ಲೋಕೋಪಯೋಗಿಇಲಾಖೆ, ಬೆಂಗಳೂರು